ವಿತ್ತೀಯ ಕಾರ್ಯ ಕಲಾಪಗಳು

1998-99ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) -ಮುಂದುವರಿದ ಚರ್ಚೆ ಹಾಗೂ ಮತಕ್ಕೆ ಹಾಕುವುದು.

+ಶ್ರೀಮತಿ ಪ್ರಮೀಳಾ ನೇಸರ್ಗಿ(ಚಾಮರಾಜಪೇಟೆ) : ಅಧ್ಯಕ್ಷರೇ, ಇವರು ಪೂರಕ ಅಂದಾಜು ಏನಿಟ್ಟಿದ್ದಾರೆ ಅದನ್ನು ನೋಡಿದಾಗ ಮಾನ್ಯ ಸಿದ್ದರಾಮಯ್ಯನವರನ್ನು ಒಂದು ಪ್ರಶ್ನೆ ಕೇಳಬೇಕು ಎನ್ನಿಸಿತು. ನಮ್ಮಮುಂದಿಟ್ಟಿರುವ ಟ್ರೆಡಿಷನಲ್ ಬಡ್ಜೆಟ್ ಅಥವಾ ಜೀರೋ ಬಡ್ಜೆಟ್ಟಾ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಅದು ಬಡ್ಜೆಟ್ ಅಲ್ಲ. ಸಂವಿಧಾನದಲ್ಲಿ ಪೂರಕ ಬಜೆಟ್ ಮಂಡಿಸುವ ಅವಕಾಶ ಇದೆ. ಬಜೆಟ್‌ನಲ್ಲಿ ಯಾವ ಕಾರ್ಯಕ್ರಮಗಳಿಗೆ ಹಣ ಒದಗಿಸುವುದಕ್ಕಾಗಿಲ್ಲ ಅಥವಾ ಹಳೇ ಕಾರ್ಯಕ್ರಮಗಳಿಗೆ ಹಣ ಕೊಡಬೇಕಾಗಿದೆಯೋ ಅದು ಪೂರಕ ಬಜೆಟ್‌ನಲ್ಲಿ ಬರುತ್ತದೆ. ಜಿರೋ ಗೀರೋ ಇಲ್ಲ, ನಾವು ಮಂಡಿಸಿರುವುದೇ ಖೋತಾ ಬಜೆಟ್.

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾನು ಏಕೆ ಕೇಳುತ್ತಿದ್ದೇನೆಂದರೆ ನಮ್ಮ ಮುಂದಿಟ್ಟಿರುವುದು ಹೊಸ ಬಜೆಟ್ ಹಳೆಯದಕ್ಕೆ ಹೆಚ್ಚು ಸೇರಿಸಿಲ್ಲ. ಆದರೆ ಜೀರೋಬಜೆಟ್ ಅಂದರೆ ಅದನ್ನು ಇಡಲು ಬರುತ್ತದೆ. ನಿಮ್ಮ ಅರ್ಥ ಇಲಾಖೆಗೆ ಈ ವ್ಯತ್ಯಾಸ ಗೊತ್ತಿದೆಯೇ? ಹಾಗೆ ಗೊತ್ತಿಲ್ಲವೆಂದು ಮೇಲ್ನೋಟಕ್ಕೆ ಕಾಣಬಾರದು. ಆದ್ದರಿಂದ ಯಾವ ಬಜೆಟ್ ಇಟ್ಟಿದ್ದೀರಿ ಎಂಬುವುದನ್ನು ಹೇಳಿದರೆ ನಾವು ಪ್ರಶ್ನೆ ಕೇಳಲು ಅನುಕೂಲವಾಗುತ್ತದೆ. ಪೂರಕ ಅಂದಾಜು ಅಂದರೆ It has to be taken care for unforeseen contingencies.Unforeseen /contingencies ನೀವು ತೆಗೆದುಕೊಂಡಿದ್ದೀರಾ ಇದರಲ್ಲಿದೆಯಾ? ಇಲ್ಲದಿದ್ದರೆ it could only be on cost over-runs, where the actuals have exceeded the already sanctioned amount. ಎಕ್ಸೀಡಾದಾಗ ಕೇಳಲು ಬರುತ್ತದೆ., ನೀವು ಯಾವುದರಲ್ಲಿ ಕೇಳುತ್ತಿದ್ದೀರಿ? ಮೊದಲ ಕ್ಯಾಟಗಿರಿ ಇದು. ಇದರಲ್ಲಿ ಜಾಸ್ತಿಯಾಗಿದೆ, ಎರಡನೇ ಕ್ಯಾಟಗಿರಿ ಅದರೆ ಅಕ್ಚುವಲ್ ಏನು ಎಂಬುದನ್ನು ನೀವು ವಿವರಿಸಬೇಕು, ಇನ್ನೊಂದು, ಇದನ್ನು ಮೊದಲನೇ ಕಂತು ಅನ್ನುತ್ತೀರಿ, ಇನ್ನೂ ಎಷ್ಟು ಕಂತು ಬರುತ್ತವೋ ಗೊತ್ತಿಲ್ಲ. ಅಂದರೆ ನಿಮ್ಮದು ಕಂತುಗಳ ಬಡ್ಜೆಟಾ?

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, Unforseen contingencies ಎನ್ನುವುದು ನಮಗೆ ಇನ್ನೂ ಗೊತ್ತಿಲ್ಲ. ಹೊಸದಾಗಿ ಹೇಳುತ್ತಿದ್ದೀರಿ. ಈಗಿರುವಂತೆ ಇದು ಪೂರಕ ಬಜೆಟ್ ಅನ್‌ಫೋರ್‌ಸೀನ್ ಎನ್ನುವುದನ್ನು ಈಗಲೇ ಹೇಗೆ ಹೇಳಲಿ?

SMT PRAMILA NESARGI : Supplementary budjet can only be for unforeseen contingencies. ಹಾಗೆ ಆಗಿಲ್ಲ. ನೀವು ಏನು ಮಾಡಿದ್ದೀರಿ ಅಂದರೆ ಅಡಿಶನಲ್ ಐಟಮ್ಸು ಕೊಟ್ಟಿದ್ದೀರಿ, ಅದನ್ನು ಇದರಲ್ಲಿ ಕೇಳುವುದಕ್ಕೇ ಬರುವುದಿಲ್ಲ. ಮೊದಲನೆಯದು, what was foreseen,What was spent. what was deviated. Taking that into account. ನೀವು

ಬಜೆಟ್ ಇಟ್ಟಿದ್ದರೆ ಒಪ್ಪಿಕೊಳ್ಳುತ್ತಿದ್ದೆ, ಅದನ್ನೂ ಮಾಡಿಲ್ಲ. ಅಥವಾ ಹೊಸ ಆದಾಯ ರೂಢಿಸಿ ಸೂಚಿಸಿದ್ದರೆ ಒಪ್ಪಬಹುದಿತ್ತು, ಅದನ್ನೂ ಮಾಡಿಲ್ಲ, ಹೋಗಲಿ, ಮೊದಲನೆಯದು ಮೀನುಗಾರಿಕೆ whether you have foreseen any amount in the earlier budjet or not, kindly explain. You have no power to ask for fresh budget in this ಈಗಲೇ ಹೊಸದಾಗಿ ಕೇಳುತ್ತಿದ್ದೀರಿ, ಹೊಸದಾಗಿ ಕೇಳಲು ಬರುವುದಿಲ್ಲ. ಹಳೆಯದರಲ್ಲಿ ಬಿಟ್ಟು ಹೋಗಿದ್ದರೆ ಕೇಳಬಹುದಿತ್ತು, ಅದಿಲ್ಲ. ಮೀನುಗಾರಿಕೆಯಲ್ಲಿ 10 ಲಕ್ಷ ಕೇಳಿದ್ದೀರಿ, ಅದು ಯಾವುದಕ್ಕೆ ಎಂದು ಹೇಳಿಲ್ಲ, ಎರಡನೆಯದು, ನಾನು ಪ್ರತಿಯೊಂದನ್ನು ಪರೀಕ್ಷಿಸಿದ್ದೇನೆ, ಮೈಸೂರು ಪೇಪರ್ ಮಿಲ್ಸ್, ಇದಕ್ಕೆ ಡಚ್ ಸರ್ಕಾರ ಎಫ್ಲೂಯೆಂಟ್ ಟ್ರೀಟ್‌ಮೆಂಟ್ ಗೆ 10.5 ಕೋಟಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಕೇಂದ್ರಸರ್ಕಾರದಿಂದ ಬಂದಿರುವ ಹಣ, ಡಚ್ ಅಸಿಸ್ಟೆನ್ಸ್, ಅದನ್ನು ಆ ಇಲಾಖೆಗೆ ಬಿಡುಗಡೆ ಮಾಡುತ್ತಿದ್ದೇವೆ ಅಷ್ಟೇ. It is an additional source given from the central government. ದುಡ್ಡುಕೊಟ್ಟರೆ ಬೇಡ ಎಂದು ಅಂದುಬಿಡುವುದೋ?

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾಳೆ ಡಚ್ ಸರ್ಕಾರ ಕೊಡುವುದಿಲ್ಲ ಅಂದರು, ಏನು ಮಾಡುತ್ತೀರಿ, ನೀವು ಬಿಡುಗಡೆ ಮಾಡುತ್ತೀರೋ?

ಶ್ರೀ ಸಿದ್ದರಾಮಯ್ಯ : ಈಗಾಗಲೇ ಕೊಟ್ಟಿದ್ದಾರೆ. ಅಲ್ಲಿನ ಒಂದು ಪ್ರಾಜೆಕ್ಟ್‌ಗಾಗಿ ಡಚ್ ಸರ್ಕಾರದಿಂದ ಹಣ ಬಂದಿದೆ ಅದನ್ನು ಬಿಡುಗಡೆ ಮಾಡಿದ್ದೇವೆ.

ಅಧ್ಯಕ್ಷರು : ನಾನು ಸಹಾಯ ಮಾಡಲು ಪ್ರಯತ್ನಿಸುತ್ತೇನೆ: ಪೂರಕ ಅಂದಾಜುಗಳಲ್ಲಿ ಸಾಮಾನ್ಯವಾಗಿ ಅಕ್ಷೇಪಣೆ ಎಲ್ಲಿ ಬರುತ್ತದೆ ಅಂದರೆ ಇವರು ಅನಿರೀಕ್ಷಿತ ವೆಚ್ಚವಾಗಿದೆ ಅಂದಾಗ ಯಾಕೆ ನಿಮಗೆ ಇಮ್ಯಾಜಿನೇಷನ್ ಇರಲಿಲ್ಲವೇ? Could you have not anticipated ಎಂದು ಕೇಳುವುದು, ವೆಚ್ಚವನ್ನು ಅಕ್ಚುವಲ್ಸ್‌ಗಿಂತ ಜಾಸ್ತಿ ಮಾಡಿದಾಗ ಯಾಕೆ ನಿಮಗೆ ಒಂದು ವೈಜ್ಞಾನಿಕ ರೀತಿ ಇಲ್ಲವಾ ಬಜೆಟ್ ರೂಪಿಸುವಾಗ, ಇಷ್ಟೊಂದು ದೊಡ್ಡ ವೇರಿಯೇಷನ್ ಯಾಕೆ ಬರುತ್ತದೆ ಎಂದು ಪ್ರಶ್ನೆ ಕೇಳಬಹುದು, You have spent so much money without the sanction of the Assembly, and you have come now for post-facto approval. not a good practice ಎಂದು ಹೇಳತಕ್ಕಂಥದ್ದು. This is how the discussion goes on.This is so far as supplimentary demands are concerned .You are very well aware of it.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಹೇಳಿದ್ದನ್ನೇ ನೀವು ಬೇರೆ ರೀತಿ ಹೇಳುತ್ತಿದ್ದೀರಿ. ಬಹುಶಃ ನಾನು ಹೇಳಿರುವುದು ಸರಿಯಾಗಿ ಅರ್ಥವಾಗದೇ ಇರಬಹುದು.ಮೂರನೆಯದು ಗಣಿ ವಿಜ್ಞಾನಕ್ಕೆ. 4 ಕೋಟಿ, 2 crores for Mines /and geology, 2 crores for Mysore Minerals ಗೆ ಹಾಕಿದ್ದಾರೆ, ಇವರು ಏನು ಹೇಳುತ್ತಾರೆ ಅಂದರೆ Assessmnent and development of Ground water ಇನ್ನೊಂದುexploitation of new minerals, ಎನ್ನುತ್ತಾರೆ. ಇದೇನು ಅವರಿಗೆ ಗೊತ್ತಿರಲಿಲ್ಲವಾ? ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಇದು ಗೊತ್ತಿರಲಿಲ್ಲವಾ? ಅಥವಾ ಈ ಇಲಾಖೆಗೆ ಆರ್ಥಿಕ

ಸಲಹೆಗಾರರೇ ಇಲ್ಲವೋ? Is there failure on the part of the Finance Department? ಇದನ್ನು ನಾವು ಕೇಳಬೇಕಾಗುತ್ತದಲ್ಲಾ. ಸುಮ್ಮನೆ ನಾನು ಈ ಕಡೆಯಿಂದ ಆ ಕಡೆಗೆ ಕಣ್ಣು ಹಾಯಿಸಿದಾಗ ಪ್ರತಿಯೊಂದು ಬೇಡಿಕೆಯಲ್ಲೂ ಇದೇರೀತಿ ಕಂಡುಬರುತ್ತದೆ. ಆಮೇಲೆ ಉನ್ನತ ಶಿಕ್ಷಣ, 477 ಲಕ್ಷ ರೂ ಕೇಳಿದ್ದಾರೆ, ತಾಂತ್ರಿಕ ಶಿಕ್ಷಣಕ್ಕೆ 477, ಮತ್ತು ವರ್ಕ್ಸ್‌ಗೆ 120 ಎಂದು ಕೇಳಿದ್ದಾರೆ ತಾಂತ್ರಿಕ ಶಿಕ್ಷಣದಲ್ಲಿ 477 ಲಕ್ಷ ಖರ್ಚು ಮಾಡಬೇಕಾಗುತ್ತದೆ ಎಂಬುದು ಇವರಿಗೆ ಗೊತ್ತಿತ್ತೋ ಇಲ್ಲವೋ? ಇದು ನನಗೂ ಅರ್ಥವಾಗುತ್ತಿಲ್ಲ. ಶಿಕ್ಷಣಮಂತ್ರಿಗಳೂ ಹೇಳಿಲ್ಲ. ಇದು ಯಾವ ಟೆಕ್ನಿಕಲ್ ಎಜ್ಯುಕೇಷನ್? ಇಂಪ್ರೂವ್‌ಮೆಂಟ್ ಮಾಡುತ್ತಾರೆ? ಯಾವ ಕೆಲಸವನ್ನು ತೆಗೆದುಕೊಳ್ಳುತ್ತಾರೆ, ಯಾರಿಗೆ ಗೊತ್ತು. 120 ಲಕ್ಷ ವರ್ಕ್ಸ್‌ಗೆ ಎಂದು ಹೇಳುತ್ತಾರೆ. ಇದು ಯಾವ ವರ್ಕ್ಸ್ ಎಂದು ನೀವು ಎಕ್ಸ್‌ಪ್ಲೈನ್ ಮಾಡಬೇಕಲ್ಲಾ ವರ್ಕ್ಸ್ ಯಾವುದೆಂದು ವಿವರಣೆ ನೀಡದೆ ಸಪ್ಲಿಮೆಂಟರಿ ಬಜೆಟನ್ನು ನೀವು ಕೇಳುವುದಾದರೆ ಇದಕ್ಕೆ ಅರ್ಥವೇ ಇಲ್ಲ. ಸಪ್ಲಿಮೆಂಟರಿ ಬಜೆಟ್ ನಲ್ಲಿ ನೀವು ಏನು ಬೇಕಾದರೂ ಕೇಳಬಹುದು, ನಾವು ಏನು ಬೇಕಾದರೂ ಸ್ಯಾಂಕ್ಷನ್ಡ್ ಮಾಡಿಕೊಂಡು ಹೋಗಬಹುದು ಎಂದು ಅರ್ಥವಾಗುತ್ತದೆ. ಆಮೇಲೆ ಯೂತ್ ಸರ್ವೀಸಸ್ 70 ಕೋಟಿ, ರಾಷ್ಟ್ರೀಯಕ್ರೀಡೆಗಳು - arrears not paid. ತಮಗೆ ಗೊತ್ತಿತ್ತೋ ಇಲ್ಲವೋ? 70 ಕೋಟಿ ಕೊಡಬೇಕಾಗಿದ್ದು ಗೊತ್ತಿತ್ತೋ ಇಲ್ಲವೋ? ಅದು ಗೊತ್ತಿದ್ದರೆ ಏತಕ್ಕೆ ಸೇರಿಸಿರಲಿಲ್ಲ? ಅಥವಾ ಏನು ಓವರ್ ಸೈಟಾ? 70 ಕೋಟಿ ರೂಪಾಯಿ ಇವತ್ತು ಕೊಡಿ ಎಂದರೆ ಇದಕ್ಕೆ ಯಾರು ಕಾರಣ? ಹೇಗೆ ಕೊಡುವುದಕ್ಕಾಗುತ್ತದೆ? ನೀವು ಇದನ್ನು ಹೇಳಬೇಕಲ್ಲಾ. ಅದೇ ಪ್ರಕಾರ ಕನ್ನಡ ಅಂಡ್ ಕಲ್ಚರ್‌ಗೆ 53 ಲಕ್ಷ. ಇದರಲ್ಲಿ 15 ಲಕ್ಷ ಗ್ರಾಂಟ್ ಇನ್ ಏಡ್, 38 ಲಕ್ಷ ಸುಭಾಷ್ ಚಂದ್ರಬೋಸ್ ಟ್ರಸ್ಟ್, ಇದು ಯಾವುದು? ಸುಭಾಷ್ ಚಂದ್ರಬೋಸ್ ಟ್ರಸ್ಟ್‌ಗೆ $38\frac{1}{2}$ ಲಕ್ಷ ಕೊಡಬೇಕು. ಮತ್ತೆ 15 ಲಕ್ಷ ಗ್ರಾಂಟ್ ಇನ್ ಏಡ್ ಎನ್ನುತ್ತಾರಲ್ಲಾ. ನಮಗೂ ಗೊತ್ತಾಗಲಿಲ್ಲವಲ್ಲಾ ದನ್ನು ಯಾರಿಗೆ ಕೊಡುವುದಕ್ಕೆ? ಯಾವಾಗ ಮಾಡಿದ್ದಕ್ಕೆ? ಹಳೆಯದಕ್ಕಾ ಅಥವಾ ಹೊಸದಕ್ಕಾ ಎಂಬುದನ್ನು ಹೇಳಬೇಕಾಗುತ್ತದೆ. ಇದಕ್ಕಿಂತ ಮುಖ್ಯವಾಗಿ ಸ್ಮಾಲ್ ಸೇವಿಂಗ್ಸ್ ಆಫೀಸ್‌ಗೆ 2 ಲಕ್ಷ ರೂಪಾಯಿ ಬೇಕು ಎನ್ನುತ್ತಾರೆ. ಏಕೆಂದರೆ ಅವರ ಆಫೀಸಿಗೆ ವಾಟರ್ ಮತ್ತು ಎಲೆಕ್ಟ್ರಿಸಿಟಿ. ಇದು ಅರ್ಥವೇ ಆಗುವುದಿಲ್ಲ. ಸ್ಮಾಲ್ ಅಂಡ್ ಸೇವಿಂಗ್ಸ್ ಆಫೀಸಿಗೆ ಎರಡು ಲಕ್ಷ ರೂಪಯಿ ವಾಟರ್ ಅಂಡ್ ಎಲೆಕ್ಟ್ರಿಸಿಟಿ ಹೇಗೆ ಬರುತ್ತದೆ? ಒಂದು ಆಫೀಸಿಗೆ ಎಲೆಕ್ಟ್ರಿಸಿಟಿ ಅಂಡ್ ವಾಟರ್ ಛಾರ್ಜ್ ಇದೆ ಎಂದು ಗೊತ್ತಿರುವುದಿಲ್ಲ. ಇದು ಹೊಸದಾಗಿ. Is it a novel thing evolved by your Finance Department? ಆಮೇಲೆ ಫಾರೆಸ್ಟ್ ಅರವತ್ತಮೂರೂವರೆ ಲಕ್ಷ ಬಂಜರು ಭೂಮಿ ಅಭಿವೃದ್ಧಿಗೆ. ಇದನ್ನು ಯಾರು ಕೊಟ್ಟಿರುವುದು, ಸೆಂಟ್ರಲ್ ಗೌರ್ನಮೆಂಟ್ ಬಂಜರು ಭೂಮಿ ಅಭಿವೃದ್ಧಿಗೆ ಕೊಟ್ಟಿರುವ ಹಣ ಅರವತ್ತಮೂರುವರೆ ಲಕ್ಷ. ಅಥವಾ ಇಡೀ ನಗರಾಭಿವೃದ್ಧಿಗೆ 10 ಲಕ್ಷ, ಕಛೇರಿ ವೆಚ್ಚಗಳು ಮತ್ತು ಬೈ ಎಲೆಕ್ಷನ್ಸ್, ಇದು ಯಾವ ಬೈ ಎಲೆಕ್ಷನ್ಸ್? ನಿಮಗೆ ಗೊತ್ತಿತ್ತೋ ಇಲ್ಲವೋ ಬೈ ಎಲೆಕ್ಷನ್ಸ್ ಆಗುತ್ತದೆ ಎಂದು. ಇದೆಲ್ಲಾ ಏನು ಅನ್ ಫೋರ್‌ಸೀನಾ? ನಾನು ಕೇಳುವುದು ಅನ್ ಫೋರ್ ಸೀನಾಗಿದ್ದರೆ ಹೊಸದು ಆಗುವುದರಿಂದ ಇದನ್ನು ಕೇಳುವುದಕ್ಕೆ ತಮಗೆ ಬರುವುದಿಲ್ಲ. ಮತ್ತೆ ಬಿಲ್ಡಿಂಗ್ 13 ಕೋಟಿ 24 ಲಕ್ಷ ಎಂದು ಹೇಳುತ್ತೀರಿ. ಇದು ಬಹಳ ಮುಖ್ಯವಾದುದು. ಗೌರ್ನಮೆಂಟ್ ಪ್ರೆಸ್‌ಗೆ 13 ಕೋಟಿ 24 ಲಕ್ಷ ರೂಪಾಯಿಗಳನ್ನು

ಹಾಕಿದ್ದೀರಿ. ಗೌರ್ನಮೆಂಟ್ ಪ್ರೆಸ್ಸನ್ನು ಮೊನ್ನೆ ತಾನೆ ಸುಟ್ಟಿದ್ದಾರೆ. ಪ್ರೆಸ್ ಸುಟ್ಟಿದೆ. ಈಗ ಕಟ್ಟಡ ಕಟ್ಟುವುದಕ್ಕೆ ಕೇಳಿದ್ದೀರಿ. ಗೌರ್ನಮೆಂಟ್ ಪ್ರೆಸ್‌ನಲ್ಲಿ ಆಗುತ್ತಿರುವ ಅನ್ಯಾಯ ಎಲ್ಲರಿಗೂ ಗೊತ್ತಿರುವುದು. ಒಂದು ಕೆಲಸವಾಗುತ್ತಿಲ್ಲ. ಬೇರೆಯವರಿಗೆ ಹಣ ಕೊಟ್ಟು ಬೇರೆ ಕಡೆ ಪ್ರಿಂಟ್ ಮಾಡಿಸುತ್ತಿದ್ದಾರೆ. ಪ್ರಿಂಟಿಂಗ್ ಎಲ್ಲಾ ಬೇರೆಯವರಿಗೆ ಕೊಡುತ್ತಿದ್ದಾರೆ. ಬಿಲ್ಡಿಂಗ್ ಕಟ್ಟುವುದಕ್ಕೆ ಹಣ ಬೇಕು ಎಂದು ಕೇಳುತ್ತಿದ್ದೀರಿ. ಹಣ ಕೊಟ್ಟು ಮತ್ತೆ ಸುಡುವುದಕ್ಕೆ? ಗೌರ್ನಮೆಂಟ್ ಪ್ರೆಸ್‌ನಲ್ಲಿ ಬಿಲ್ಡಿಂಗ್ ಎರಡನೇ ಮತ್ತು ಮೂರನೇ ಕಟ್ಟಡಕ್ಕೆ ಎಂದು ಕೇಳುತ್ತಿದ್ದೀರಿ. ಈಗ ಇರುವ ಕಟ್ಟಡದಲ್ಲಿ ಕೆಲಸವಾಗುತ್ತಿಲ್ಲ. ಯಾವ ಕೆಲಸವೂ ಪ್ರೆಸ್‌ನಲ್ಲಿ ಆಗುತ್ತಿಲ್ಲ. ಇರುವ ಪ್ರೆಸ್ ಕೂಡ ಸುಟ್ಟಿದೆ. ಸುಡುವವರಿಗೆ ಎಕ್ಸ್‌ಪ್ಲಾನೇಷನ್ ಏಕೆ ಬೇಕು? ಸುಟ್ಟು ಹೋಗುತ್ತಿರುವ ಪ್ರೆಸ್‌ಗೆ ಎಕ್ಸ್‌ಪ್ಲಾನೇಷನ್ ಏಕೆ ಬೇಕು ಎಂದು ಇವತ್ತು ನೋಡಬೇಕಾಗುತ್ತದೆ. ಅವರ ಮೇಲೆ ಎನ್‌ಕ್ವೈರಿ ಆಗಬೇಕು ಎಂದು ಹೇಳಿ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ನಲ್ಲಿ ಮೂರು ತಿಂಗಳು ಆಯಿತು ಆರ್ಡರ್ ಮಾಡಿ. ಎರಡು ತಿಂಗಳೊಳಗಡೆ ವರದಿಯನ್ನು ಕೊಡಬೇಕು ಎಂದು ಹೇಳಿದ್ದರು. ನಿಮ್ಮ ಕಾರ್ಯದರ್ಶಿಯವರು ಇವತ್ತಿನವರೆಗೂ ವರದಿಯನ್ನು ಕೊಟ್ಟಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಅವರನ್ನು ಸಸ್ಪೆಂಡ್ ಮಾಡಿಲ್ಲ, ಆದರೂ ಸಹಾ ಆ ಬಿಲ್ಡಿಂಗ್‌ಗೆ ಈಗ ಹಣವನ್ನು ಬಿಡುಗಡೆ ಮಾಡಿದರೆ ಆ ಹಣದ ಗತಿ ಏನಾಗಬೇಕು. ಮತ್ತೆ ಆ ಗೌರ್ನಮೆಂಟ್ ಪ್ರೆಸ್‌ನ ಗತಿ ಏನಾಗುತ್ತದೆ ಎಂಬುದನ್ನು ತಾವು ನೋಡಬೇಕಲ್ಲಾ. ಇನ್ನು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ಗೆ ಎನ್‌ಸಿಡಿಸಿ ಅಪೆಕ್ಸ್ ಬ್ಯಾಂಕ್‌ನವರಿಗೆ 28.50 ಇದು ಸೆಂಟ್ರಲ್ ಗೌರ್ನಮೆಂಟ್‌ನಿಂದ ಬಂದಿರುವ ಹಣ. ಹಮಾಲರ ವಸತಿ ಹತ್ತು ಸಾವಿರ ರೂಪಾಯಿ ಒಂದು ಮನೆಗೆ ಕೊಡಬೇಕು ಎಂದು ಹೇಳಿದ್ದೀರಿ. ಹೊಡ್ಕೋ ತರಹ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ.2 ಕೋಟಿ ರೂಪಾಯಿ ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಎರಡು ಕೋಟಿ ರೂಪಾಯಿಗಳನ್ನು ಯಾವಾಗ ಕೊಟ್ಟರು? ನೀವು ಬಿಡುಗಡೆ ಮಾಡಿರುವುದು 50 ಲಕ್ಷ ಹಮಾಲರ ವಸತಿಗೆ. ಸೆಂಟ್ರಲ್ ಗೌರ್ನಮೆಂಟ್ ಕೊಟ್ಟಿರುವ ಹಣದಲ್ಲಿ 50 ಲಕ್ಷ ತಾವು ಬಿಡುಗಡೆ ಮಾಡಿ ಇವತ್ತು ಅಡಿಷನಲ್ ಕೇಳುತ್ತಿದ್ದೀರಿ. ಸೆಂಟ್ರಲ್ ಗೌರ್ನಮೆಂಟ್ ಕೊಟ್ಟಿದ್ದು ನಿಮಗೆ ಗೊತ್ತಿತ್ತೋ ಇಲ್ಲವೋ ಮೊದಲು. ಯಾವಾಗ ಬಂತು ಎಂದು ತಾವು ಹೇಳಬೇಕಲ್ಲಾ. ಒಂದೂ ಕೂಡ ಹೇಳಿಲ್ಲ. ಇದೇ ರೀತಿ ಗ್ರಾಮೀಣಾಭಿವೃದ್ಧಿಗೆ ಸೆಂಟ್ರಲ್ ಗೌರ್ನಮೆಂಟಿನಿಂದ 97-98ಕ್ಕೆ 170.96 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಅಂಬೇಡ್ಕರ್ ವಸತಿಗೆ 165 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಎಸ್‌ಸಿ ಎಸ್‌ಟಿಗೆ34.55 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಇವೆಲ್ಲವನ್ನೂ ಬಿಟ್ಟು 2.59 ಲಕ್ಷ ರೂಪಾಯಿಗಳು, ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತೀರಿ. ಇದು ತಮಗೆ ಗೊತ್ತಿತ್ತೋ ಇಲ್ಲವೋ? ಇದ್ಯಾವುದನ್ನೂ ಕೂಡ ಹೇಳದೆ ಈಗ ತಾವು ಏಕಾಏಕಿ ಈ ಬಿಲ್ಲನ್ನು ತೆಗೆದುಕೊಂಡು ಬಂದು ನಮ್ಮನ್ನು ಅಪ್ರೂವ್ ಮಾಡಿ ಎಂದು ಕೇಳುವುದು ನ್ಯಾಯವಾದದ್ದಲ್ಲ. ಈ ರೀತಿ ಮಾಡಬಾರದಾಗಿತ್ತು. ಮಾಡಿರುವುದು ಬಹಳ ತಪ್ಪು ಇನ್ನು ಮುಂದಾದರೂ ನಿಮ್ಮ ಆರ್ಥಿಕ ಇಲಾಖೆಗೆ ಹೇಳಿ ಈ ರೀತಿ ತಪ್ಪಾಗಾದ ಹಾಗೆ ನೋಡಿಕೊಳ್ಳುತ್ತೇವೆ ಎಂದು ಹೇಳುವ ಭರವಸೆಯನ್ನು ತಾವು ಈ ಸದನಕ್ಕೆ ಕೊಡಬೇಕು. ಏನೋ ಆಗಿದ್ದು ಆಗಿಹೋಗಿದೆ. ಏನೋ ಪಾಪ, ನಮಗೆ ಸಹಾಯಮಾಡಿ ಎಂದು ಕೇಳುತ್ತಿದ್ದೀರಿ. ನಾವು ನಿಮ್ಮ ಸಹಾಯಕ್ಕೆ ಬರೋಣ. ಬರುವುದು

ಬೇಡ ಎಂದಲ್ಲ. ಆದರೆ ನಿಮ್ಮ ಆರ್ಥಿಕ ಇಲಾಖೆ ಎಂಥ ತಪ್ಪು ಮಾಡಿದ್ದಾರೆ ಎಂದರೆ ಯಾರಾದರೂ ಚಾರ್ಟರ್ಡ್ ಅಕೌಂಟೆಂಟ್ ನೋಡಿದರೆ ನಿಮ್ಮ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಯಾರಿದ್ದಾರೆ, ಅವರನ್ನು ಈ ಇಲಾಖೆಯಲ್ಲಿ ಇರುವುದಕ್ಕೆ ಖಂಡಿತವಾಗಿಯೂ ಬಿಡುವುದಿಲ್ಲ. If a proper action is taken he would have been kept under suspension. These are the grave irregularities that are noticed in the budget. But we condone for the time being.

+ ಶ್ರೀ ಟಿ.ಬಿ. ಚಯಚಂದ್ರ (ಕಳ್ಳಂಬೆಳ್ಳ) : ಈಗಾಗಲೇ ತಾವು ವಿವರಣೆ ಕೊಟ್ಟ ರೀತಿಯಲ್ಲಿ ಒಂದು ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ್ನು ಸಭೆಯ ಮುಂದೆ ತರುವ ಸಮಯದಲ್ಲಿ ನಾನು ಚಿಂತನೆ ಮಾಡಿದ್ದು ಯುವಕರಾಗಿರುವ ಸಿದ್ಧರಾಮಯ್ಯನವರು ಬಹಳ ವಿಚಾರವನ್ನು ಮಾಡಿ ಬಜೆಟನ್ನು ಮಂಡನೆ ಮಾಡುತ್ತಾರೆಂದು ತಿಳಿದಿದ್ದೆ. ಸಪ್ಲಿಮಂಟರಿ ಎಸ್ಟಿಮೇಟ್ಸ್‌ನಲ್ಲಿ ಬಂದಾಗ ತಮ್ಮ ವಿವೇಚನೆಯಲ್ಲಿ ಏನಾದರೂ ಕೂಡ ಕೊರತೆಯಾಗಿದೆಯೋ ಎಂಬುದು ಒಂದು ನನ್ನ ಭಾವನೆ. ಯಾವುದಾದರೂ ಒಂದು ಹೊಸ ಯೋಜನೆಗಳನ್ನು ಮಾಡುವ ಸಂದರ್ಭದಲ್ಲಿ ಅನುದಾನದಲ್ಲಿ ನೀವು ಪ್ರಾವಿಷನ್ ಮಾಡದೇ ಇರುವ ಬಜೆಟನ್ನು ಪ್ರಾವಿಷನ್ ಮಾಡದೇ ಇರುವ ವಿಶೇಷ ಸಂದರ್ಭದಲ್ಲಿ ಮಾತ್ರ ಇವತ್ತು ಸಪ್ಲಿಮೆಂಟರಿ ಎಸ್ಟಿಮೇಟ್ಸನ್ನು ತರಬಹುದು. ಈಗ ತಾವು ಅಂಥ ವಿವೇಚನೆಯನ್ನು ಮಾಡಿಲ್ಲ ಎನ್ನುವುದಕ್ಕೆ ಒಂದು ಕಾರಣವನ್ನು ಹೇಳುವುದಾದರೆ ತಾವು ಒಂದು ಮಾತನ್ನು ಹೇಳಿದಿರಿ. ಹಾಲಿ ಇರುವ ಗಣಿಗಳಲ್ಲಿ ಮತ್ತು ಹೊಸ ಗಣಿಗಳಲ್ಲಿ ಗಣಿಗಾರಿಕೆಯನ್ನು ಕೈಗೊಳ್ಳಲು ಮೈಸೂರು ಮಿನರಲ್ಸ್ ಲಿಮಿಟೆಡ್‌ನ 200 ಲಕ್ಷ ರೂಪಾಯಿಗಳ ಬಡ್ಡಿ ರಹಿತ ಸಾಲವನ್ನು ಮಂಜೂರು ಮಾಡಲಾಯಿತು. ಇದನ್ನು ಮಂಜೂರು ಮಾಡಿದಮೇಲೆ ಇದನ್ನು ಆಯವ್ಯಯದಲ್ಲಿ ಉದ್ದೇಶಕ್ಕೆ ಹಣವನ್ನು ಒದಗಿಸಿಲ್ಲ ಏಕೆ? ನಾನು ಏತಕ್ಕೋಸ್ಕರ ಹೇಳುತ್ತೇನೆಂದರೆ ತಾವು ಯಂಗಸ್ಟರ್ ಆಗಿರುವ ಹಣಕಾಸು ಮಂತ್ರಿಗಳಿದ್ದೀರಲ್ಲಾ, ತಾವೂ ಕೂಡ ಎಲ್ಲದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಸಪ್ಲಿಮೆಂಟರಿ ಎಸ್ಟಿಮೇಟ್ಸ ಬರದ ರೀತಿಯಲ್ಲಿ ಇವತ್ತು ಬಜೆಟನ್ನು ಮಾಡಬಹುದಾಗಿತ್ತು. ನಾನು ಮಾನ್ಯ ಅರ್ಥಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. 2 ಕೋಟಿ ರೂಪಾಯಿಗಳನ್ನು ನೀವು ಬಡ್ಡಿ ರಹಿತ ಸಾಲವನ್ನಾಗಿ ಮೈಸೂರು ಮಿನರಲ್ಸ್ ಲಿಮಿಟೆಡ್‌ಗೆ ಕೊಡುತ್ತಿದ್ದೀರಿ. ಇವತ್ತು 2 ಕೋಟಿ ರೂಪಾಯಿಗಳನ್ನು ಬಡ್ಡಿ ಇಲ್ಲದೆಯೇ ಮೈಸೂರು ಮಿನರಲ್ಸ್ ಲಿಮಿಟೆಡ್‌ಗೆ ಕೊಡುತ್ತೀರಿ ಎಂದಾಗ ನಿಮ್ಮ ಆರ್ಗನೈಜೇಷನ್ಸ್ ಎಷ್ಟು ಎಫೆಕ್ಟೀವ್ ಆಗಿ ನಡೆಯುತ್ತಿದೆ ಎಂದು ಚಿಂತನೆ ಮಾಡಬೇಕಾಗುತ್ತದೆ. ಮೈಸೂರು ಮಿನರಲ್ಸ್ ಲಿಮಿಟೆಡ್ ಎನ್ನುವ ಒಂದು ಆರ್ಗನೈಜೇಷನ್‌ಗೆ ಇವತ್ತು ಬಡ್ಡಿರಹಿತವಾದ ಸಾಲವನ್ನು ಸರ್ಕಾರದ ಬೊಕ್ಕಸದಿಂದ ಕೊಡಬೇಕು ಎನ್ನುವುದಾದರೆ ಇವತ್ತು ಅವರ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ನಾನೊಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿಯವರೆಗೂ ಕೂಡ ಈಗಾಗಲೇ ಈ ಸಾರಿ ಆಯವ್ಯಯದಲ್ಲಿ ಸುಮಾರು 100 ಕೋಟಿ ರೂಪಾಯಿಗಳಷ್ಟು ಇವತ್ತು ನಷ್ಟದಲ್ಲಿ ಇರುವ ಕೈಗಾರಿಕೆಗಳಿಗೆ ಇಂಥ ಆರ್ಗನೈಜೇಷನ್ ಗಳಿಗೆ 100 ಕೋಟಿ ರೂಪಾಯಿಗಳನ್ನು ಇವತ್ತು ಅನುದಾನದಲ್ಲಿ ಕೊಡುತ್ತಿದ್ದೀರಿ, ಎಲ್ಲಿದೆ ದುಡ್ಡು? ಇವತ್ತು ನೀವು ಆದ್ಯತೆ ಮೇಲೆ ಮಾಡಬೇಕಾಗಿರುವ ಸಾಕಷ್ಟು ಕೆಲಸವನ್ನು ವಿದ್ಯುಚ್ಛಕ್ತಿ ಒಂದು ಕಡೆ ಇರಬಹುದು, ನೀರಾವರಿ ಇನ್ನೊಂದು ಕಡೆ ಇರುವ ಸಂದರ್ಭದಲ್ಲಿ ಇಂಥ ಒಂದು ಕೈಗಾರಿಕೆಗಳಾಗಲಿ ಅಥವಾ ಕಾರ್ಪೊರೇಷನ್ಸ್‌ಗಳಿಗೆ ಇನ್ನೂ ಕೂಡ

ಸರ್ಕಾರದ ಬೊಕ್ಕಸದಿಂದ ದುಡ್ಡನ್ನು ಕೊಡುವ ಪರಿಪಾಠವನ್ನು ನೀವು ಮುಂದುವರೆಸಿದ್ದೇ ಆದರೆ. ನಿಜವಾಗಿಯೂ ಇವತ್ತು ಸರ್ಕಾರದ ಬೊಕ್ಕಸಕ್ಕೆ ಬಹಳ ಕಷ್ಟವಾಗುತ್ತದೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇವೆಲ್ಲವನ್ನೂ ನೀವು ಅವರ ಸ್ವಂತ ಕಾಲಮೇಲೆ ನಿಲ್ಲುವ ಮಟ್ಟಕ್ಕೆ ನೀವು ಅಡ್ಜಿನಿಸ್ಟ್ರೇಷನನ್ನು ಮಾಡಬೇಕಾಗುತ್ತದೆ ಮತ್ತು ಈಗಾಗಲೇ ಕೇಂದ್ರ ಸರ್ಕಾರದವರು ಮಾಡಿರುವ ಡಿಸ್ ಇನ್‌ವೆಸ್ಟ್‌ಮೆಂಟ್ ಪ್ರೋಗ್ರಾಮ್ ಏನು ಇದೆ, ನಷ್ಟದಿಂದ ಇರುವ ಒಂದು ಕಾರ್ಪೊರೇಷನ್‌ಗೆ ಕಾಯಕಲ್ಪ ಮಾಡುವುದು, ಅದರ ಬಗ್ಗೆ ಯಾವುದೇ ಒಂದು ಚಿಂತನೆ ತಮ್ಮ ಕಾಲದಲ್ಲಿ ಆಗಲಿಲ್ಲ. ನಾನು ಬಹಳಷ್ಟು ನಿರೀಕ್ಷಿಮಾಡಿದ್ದೆ. ಇವತ್ತು ನೀವು ನೂರು ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿ ಇರುವ ಕಾರ್ಪೊರೇಷನ್‌ಗಳಿಗೆ ಸರ್ಕಾರದ ಬೊಕ್ಕಸದಿಂದ ಕೊಡುತ್ತಿದ್ದೀರಿ.

10.50 ಎ.ಎಂ

ಸುಮಾರು ನೂರು ಕೋಟಿ ರೂಪಾಯಿ ಹಣವನ್ನು ಇಂಥ ನಷ್ಟದಲ್ಲಿರುವ ಕೈಗಾರಿಕೆಗಳಿಗೆ, ಕಾರ್ಪೊರೇಷನ್‌ಗಳಿಗೆ, ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳಿಗೆ ಕೊಡುತ್ತಿದ್ದೀರಿ. ಮೂರೂವರೆ ಸಾವಿರ ಕೋಟಿ ರೂಪಾಯಿಗಳನ್ನು ಒಂದು ಕಡೆ ಮೂಲ ಬಂಡವಾಳವನ್ನು ಹಾಕಿದ್ದರೆ ಮತ್ತೊಂದು ಕಡೆ ಅದಕ್ಕೆ ಸುಮಾರು ಮೂರೂವರೆ ಸಾವಿರ ಕೋಟಿಯಷ್ಟು ಸರ್ಕಾರದಿಂದ ಸಾಲವನ್ನು ಕೊಟ್ಟಿದ್ದೀರಿ. ಅದನ್ನೂ ಸರ್ಕಾರವೇ ತೊಡಗಿಸಿದಂತಾಗುತ್ತದೆ. ಹೀಗೆ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳಿಗೆ ಸರ್ಕಾರದಿಂದ 7-8 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹಾಕಿ ಮತ್ತೆ ಅವುಗಳಿಗೆ ಹಣವನ್ನು ಕೊಡುವುದಾದರೆ ಎಲ್ಲಿಂದ ಹಣ ಬರುತ್ತದೆ? ದಯಮಾಡಿ ಬಡ ಬೋರೇಗೌಡನ ಜನಸಾಮಾನ್ಯರ ಹಣವನ್ನು ಈ ರೀತಿ ತೊಡಗಿಸತಕ್ಕದ್ದು ಸರಿಯಲ್ಲ. ಇದರ ಬಗ್ಗೆ ತಾವು ಚಿಂತನೆ ಮಾಡಬೇಕಾಗುತ್ತದೆ. ಮತ್ತೊಂದು ಪ್ರಮುಖವಾದ ವಿಚಾರವೇನೆಂದರೆ, ಕೋರಮಂಗಲ ಬಡಾವಣೆಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು ನಿರ್ಮಾಣ ಮಾಡಿರುವಂಥ ಕೊಠಡಿಗಳಲ್ಲಿ ಲೋಕೋಪಯೋಗಿ ಇಲಾಖೆಯವರಿಗೆ 112, ನ್ಯಾಯಾಂಗ ಇಲಾಖೆಯವರಿಗೆ 224 ಕೊಡುತ್ತಿದ್ದೀರಿ. ಆ ಕೆಲಸಕ್ಕೆ ಹಣದ ಕೊರತೆ ಬಿತ್ತು ಅದಕ್ಕೆ ಈಗ ಪ್ರಾವಿಷನ್ ಮಾಡಿದ್ದೇವೆಂದು ತಾವು ತಿಳಿಸಿರುತ್ತೀರಿ. ಇದರ ಬಗ್ಗೆ ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ರಾಷ್ಟ್ರೀಯ ಕ್ರೀಡೆಗಳ ಸಲುವಾಗಿ ಕ್ರೀಡಾಸಮುಚ್ಚಯವನ್ನು ನಿರ್ಮಾಣ ಮಾಡುವ ಕೆಲಸವನ್ನು ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ತೆಗೆದುಕೊಂಡಂಥ ಸಂದರ್ಭದಲ್ಲಿ ಅಂದಾಜು ಸಮಿತಿಯ ಸದಸ್ಯನಾಗಿ ನಾನೂ ಅಲ್ಲಿಗೆ ಹೋಗಿ ಅದನ್ನು ನೋಡಿದ್ದೇನೆ. ಅಲ್ಲಾಗಿರುವ ಕೆಲಸಗಳನ್ನೂ ಸಹ ಗಮನಿಸಿದ್ದೇನೆ. ಅದನ್ನು ಆಧುನಿಕ ತಂತ್ರಜ್ಞಾನದ ನೆರವಿನೊಂದಿಗೆ ಕಟ್ಟಿರುತ್ತೀರಿ. ಆದರೆ ತಾವು ಹುಡ್ಕೊದಿಂದ ಕೋಟ್ಯಾಂತರ ರೂಪಾಯಿಗಳನ್ನು ಸಾಲವಾಗಿ ತಂದು ಅಲ್ಲಿ ಸಮುಚ್ಚಯವನ್ನು ಕಟ್ಟಿ ಇದುವರೆಗೂ ಅಲ್ಲಿನ ಕೊಠಡಿಗಳು ಸಂಪೂರ್ಣವಾಗಿ ಮಾರಾಟವಾಗಿಲ್ಲವೆಂದರೆ ಏತಕ್ಕಾಗಿ ಇದನ್ನು ಮಾಡಬೇಕಾಗಿತ್ತು? ಅದಕ್ಕೆ ಸರ್ಕಾರದಿಂದ ಹಣವನ್ನು ಕೊಡುವುದರ ಬದಲಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಬಹುದಿತ್ತು. ನ್ಯಾಯಾಂಗ ಇಲಾಖೆಗೆ ಪಿ.ಡಬ್ಲ್ಯೂ.ಡಿ. ಇಲಾಖೆಯವರಿಗೆ ಆ ಕೆಲಸವನ್ನು ಕೊಡಬಹುದಿತ್ತು. ಇವತ್ತು ವಸತಿ ಇಲ್ಲದ ಅಧಿಕಾರಿಗಳು ಬೇಕಾದಷ್ಟು ಇದ್ದಾರೆ. ಅಂಥವರಿಗೆ ಇದನ್ನು ಹಸ್ತಾಂತರ ಮಾಡಿ ಅವರ ಮೂಲಕ ಹಣವನ್ನು ಕಟ್ಟತಕ್ಕ ಕೆಲಸ ಮಾಡಿದ್ದರೆ

ಶಾಶ್ವತವಾದ ಆಸ್ತಿಯಾಗಿ ಅದು ಉಳಿಯುತ್ತಿತ್ತು. ಈಗಲೂ ಸರ್ಕಾರದಿಂದ ಅದಕ್ಕೆ ಹಣವನ್ನು ಕೊಡತಕ್ಕದ್ದು ಸೂಕ್ತವಲ್ಲ. ತಾವು ಏಕೆ ಅದಕ್ಕೆ ಹಣವನ್ನು ಕೊಡಬೇಕೆಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಅಲ್ಲಿ ಎಷ್ಟು ಕೊಠಡಿಗಳು ಖಾಲಿ ಇದೆ, ಅದರಿಂದ ರಾಜ್ಯಕ್ಕಾಗಿರುವ ಲಾಭವೇನು? ಅದರ ಸಾಧಕ ಭಾದಕಗಳೇನು? ರಾಜ್ಯಕ್ಕಾಗಿರುವ ಹೊರೆಯಾದರೂ ಏನು ಎಂಬ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ಮತ್ತು ಅದರ ಬಗ್ಗೆ ವಿವರಣೆಯನ್ನು ನೀಡಬೇಕಾಗುತ್ತದೆ. ಇದರಲ್ಲಿ ತಾವು ಕೈಹಾಕತಕ್ಕ ಪ್ರಶ್ನೆ ಬಂದಾಗ ಅನೇಕ ಸದಸ್ಯರುಗಳು ವಿರೋಧವನ್ನು ವ್ಯಕ್ತ ಮಾಡಿದರು. ಯಲಹಂಕದಲ್ಲಿರುವ ಕ್ವಾರ್ಟ್ರಸ್ ಸಾಕಷ್ಟು ಇದೆ, ಹಾಗಿದ್ದ ಮೇಲೆ ಕೋರಮಂಗಲದಲ್ಲಿ ಏಕೆ ಬೇಕು ಎಂದು ಹೇಳಿದ್ದರು. ನಾನು ಅಂದಾಜು ಸಮಿತಿಯ ಸದಸ್ಯನಾಗಿ ಅದನ್ನು ಹೋಗಿ ನೋಡಿರುವಂತೆ ನಮ್ಮ ರಾಜ್ಯಕ್ಕೆ ವಿಶೇಷವಾದಂಥ ಆಸ್ತಿ ಆಗಿದೆಯೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ಸಮರ್ಪಕವಾಗಿ ಬಳಸದೆಯೇ ಅದಕ್ಕೆ ಸರ್ಕಾರದಿಂದ ಹಣವನ್ನು ಕೊಡುವುದು ಸರಿಯಾದುದ್ದಲ್ಲ. ಇದನ್ನು ಸಪ್ಲಿಮೆಂಟರಿ ಬಜೆಟ್ ನಲ್ಲಿ ತರುವ ಅಗತ್ಯವಿರಲಿಲ್ಲ. ನಾಲ್ವಾರು ವರ್ಷಗಳಲ್ಲಿ ಬರುವಂಥ ಕಾರ್ಯಕ್ರಮಗಳು ಇವುಗಳಾಗಿರುವುದರಿಂದ ಇದರಲ್ಲೇನು ಅಚಾತುರ್ಯವಾಯಿತು ಎಂಬ ಬಗ್ಗೆ ನಾನು ಕೇಳಬಯಸುತ್ತೇನೆ. ರಾಜ್ಯಾಂಗದತ್ತವಾಗಿ ಸಪ್ಲಿಮೆಂಟರಿ ಬಜೆಟ್‌ನ್ನು ತರಲು ತಮಗೆ ಪರಮಾಧಿಕಾರವಿದೆ. ಅದನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ಅದಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಒಳ್ಳೆಯ ಬಜೆಟ್‌ನ್ನು ಮಂಡನೆ ಮಾಡಿದರು, ಸಪ್ಲಿಮೆಂಟರಿ ಬಜೆಟ್‌ನ್ನು ಮಾಡುವ ಅಗತ್ಯತೆ ಬೀಳಲಿಲ್ಲವೆನ್ನುವ ಮಟ್ಟಕ್ಕೆ ತಾವು ಹೋಗಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರದ ಬೊಕ್ಕಸದಲ್ಲಿ ಆಗತಕ್ಕ ಹೊರೆಯನ್ನು ಕಡಿಮೆ ಮಾಡುವ ಬಗ್ಗೆ ತಾವು ಚಿಂತನೆ ಮಾಡಬೇಕು. ಇದರ ಬಗ್ಗೆ ಒಂದೆರಡು ದಿವಸ ಸದನದಲ್ಲಿ ಚರ್ಚೆ ಮಾಡಬೇಕು, ಸಿದ್ದರಾಮಯ್ಯನವರಿಗೆ ಹೆಚ್ಚಿನ ಶಕ್ತಿ ಕೊಡಬೇಕು, ಹಣಕಾಸಿನ ಉಳಿತಾಯವಾಗುವಂತೆ ಮಾಡಬೇಕು, ನಾನ್‌ಪ್ಲಾನ್‌ನಲ್ಲಿ ವೆಚ್ಚ ಅಧಿಕವಾಗಿ, ಸೃಷ್ಟಿಯಾಗುತ್ತಿರುವ ಉದ್ಯೋಗಗಳೇನು, ಅದರ ಮೇಲಾಗುವ ಹೊರೆ ಇವೆಲ್ಲವನ್ನೂ ತಪ್ಪಿನಬೇಕು ಎಂಬ ಬಗ್ಗೆ ಎರಡು ದಿವಸಗಳ ಹಿಂದೆ ಮಾನ್ಯ ಅಧ್ಯಕ್ಷರೇ ಸಲಹೆಯನ್ನು ಕೊಟ್ಟಿದ್ದಾರೆ. ತಾವು ಇದರ ಬಗ್ಗೆ ನಿಜವಾಗಿಯೂ ಗಮನಹರಿಸಬೇಕಾಗುತ್ತದೆ. ಇಡೀ ಸದನದ ಎಲ್ಲಾ ಸದಸ್ಯರುಗಳ ಭಾವನೆಗಳನ್ನು ಕೇಳಿ ತಮ್ಮ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಾವತ್ತೇ ಆಗಲಿ ಯಾವುದೇ ಬಜೆಟ್‌ನ್ನು ಮಂಡನೆ ಮಾಡಬೇಕಾದರೆ ಎಲ್ಲಾ ಕಾಲದಲ್ಲೂ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಾಗಿತ್ತು ಎಂಬುವಂತೆ ಮಾಡಬೇಕು. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಇವತ್ತು ಯೋಜನೇತರ ವೆಚ್ಚ ಜಾಸ್ತಿಯಾಗಿ ನಮ್ಮ ಬಜೆಟ್‌ನಲ್ಲಿ ಹೆಚ್ಚುಕಮ್ಮಿಯಾಗಿದೆ ಎಂಬುದನ್ನು ಒಪ್ಪಬೇಕಾಗುತ್ತದೆ. ಇಷ್ಟನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಪ್ಲಾನ್, ನಾನ್‌ಪ್ಲಾನ್ ಎಂದರೆ ಏನು ಎಂಬ ಬಗ್ಗೆ ಹೇಳುವುದಾದರೆ.

ಶ್ರೀ ಟಿ.ಬಿ. ಜಯಚಂದ್ರ : ಸರ್ಕಾರದ ಬೊಕ್ಕಸದಿಂದ ಹಾಕತಕ್ಕ ಬಂಡವಾಳವೇನಿದೆ ಅದನ್ನು ಲಾಭ ಬರತಕ್ಕ ಕಾರ್ಯಕ್ರಮಗಳಿಗೆ ಹಾಕಬೇಕಾಗುತ್ತದೆ. ಇವತ್ತು ರೋಗಗ್ರಸ್ತ ಕೈಗಾರಿಕೆಗಳಿಗೆ ವರ್ಷ ವರ್ಷ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಲ್ಲಾ ಏಕೆ ಕೊಡುತ್ತೀರಾ? ಸುಮಾರು 8-9

ಸಾವಿರ ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಉದ್ದಿಮೆಗಳಲ್ಲಿ ತೊಡಗಿಸಿ ಅವರು ಇನ್ನೂ ಅವರ ಕಾಲಮೇಲೆ ನಿಲ್ಲದಿದ್ದರೆ ತಾವು ಮತ್ತೆ ಅವರಿಗೆ ಹಣವನ್ನು ಕೊಡಬೇಕೇ? ಈ ರೀತಿ ಕೊಡಲು ಸಾಧ್ಯವಾಗುತ್ತದೆಯೇ? ಇಲ್ಲಿಗೆ ಕೊಡುವ ಹಣವನ್ನು ನಿಲ್ಲಿಸಿ ಬೇರೆ ಕಾರ್ಯಕ್ರಮಕ್ಕೆ ಕೊಡಿ. ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡಲು ಸಬ್ಸಿಡಿ ಕೊಡಿ. ಮತ್ತೊಂದು ಕಾರ್ಯಕ್ರಮಕ್ಕೆ ಕೊಡಿ. ಎಸ್ಟಾಬ್ಲಿಷ್‌ಮೆಂಟ್ ಇರುವ ಆರ್ಗನೈಸ್ಡ್ ಸೆಕ್ಟಾರ್‌ಗೆ ಹಣವನ್ನು ಕೊಟ್ಟುಕೊಂಡು ಹೋದರೆ ಹೇಗೆ ಸರಿಯಾಗುತ್ತದೆ? ಸರ್ಕಾರಕ್ಕೆ ಲಾಭ ಬರುವ ನಿಟ್ಟಿನಲ್ಲಿ ನೋಡಬೇಕಾಗುತ್ತದೆ. ರಾಜ್ಯ ಅಭಿವೃದ್ಧಿಯಾಗಬೇಕಾದರೆ ಹೆಚ್ಚು ಹೆಚ್ಚು ಹಣವನ್ನು ಅಭಿವೃದ್ಧಿ ಕೆಲಸಗಳಿಗಾಗಿ ಖರ್ಚು ಮಾಡಬೇಕಾಗುತ್ತದೆ. ಇದರ ಜೊತೆಗೆ ಸಂಪನ್ಮೂಲವನ್ನು ಹೆಚ್ಚು ಮಾಡುವ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ತಾವು ಯೋಜನೆಯ ಮೂಲಕ ಹಣವನ್ನು ಬಿಡುಗಡೆ ಮಾಡಬೇಕಾದರೆ ನೂರು ಸಲ ಯೋಚನೆ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಅಧಿಕ ಲಾಭ ಬರುವ ಕಾರ್ಯಕ್ರಮಕ್ಕೆ ಹಣವನ್ನು ತೊಡಗಿಸಿದರೆ ತಮ್ಮ ಬಜೆಟ್ ಸರ್‌ಪ್ಲಸ್ ಆಗುತ್ತದೆ. ಡೆಫಿಸಿಟ್ ಬರಲು ಸಾಧ್ಯವಾಗುವುದಿಲ್ಲವೆನ್ನತಕ್ಕ ಮಾತನ್ನು ಹೇಳಬಯಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ಪೂರಕ ಅಂದಾಜುಗಳಿಗೆ ವಿರೋಧವನ್ನು ಮಾಡುವುದಿಲ್ಲ. ಆದರೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಯವ್ಯಯದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಜನ್ಮೋತ್ಸವಕ್ಕೆ ಹಣವನ್ನು ಒದಗಿಸಿಲ್ಲ. ಆದ್ದರಿಂದ ಪೂರಕ ಅಂದಾಜಿನಲ್ಲಿ ಅದಕ್ಕೆ 38 ಲಕ್ಷ ರೂ. ಒದಗಿಸಿದ್ದೀರಿ. ಸಂತೋಷ. ರಾಷ್ಟ್ರದ ನಾಯಕರು ಮತ್ತು ಕರ್ನಾಟಕದ ಏಕೀಕರಣಕ್ಕೆ ಹೋರಾಟ ಮಾಡಿದಂಥ ಹಿರಿಯ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರ ಪ್ರತಿಮೆಯನ್ನು ಮಾಡಲು ಸರ್ಕಾರಕ್ಕೆ ಸದನದಲ್ಲಿ ಅನೇಕಸಾರಿ ಒತ್ತಾಯ ಮಾಡಿದ್ದೇವೆ. ವಿಧಾನ ಸೌಧದ ಮುಂದೆ ಅವರ ಪ್ರತಿಮೆಯನ್ನು ಹಾಕಬೇಕು ಎಂದು ತಮ್ಮ ಸರ್ಕಾರದ ಮತ್ತು ಹಿಂದಿನ ಸರ್ಕಾರಗಳ ನಿರ್ಧಾರವಾಗಿತ್ತು. ಇದರ ಬಗ್ಗೆ ಮಾನ್ಯ ದೇವೇ ಗೌಡರು ಹೇಳಿಕೆಯನ್ನು ಕೊಟ್ಟಿದ್ದರು. ಇದಕ್ಕಾಗಿ ಏನು ಮಾಡಿದ್ದೀರಿ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ತಾವು ವಿವರಣೆ ನೀಡುತ್ತೀರಿ ಎಂದು ತಿಳಿದುಕೊಂಡಿರುತ್ತೇನೆ. ಇದರ ಜೊತೆಗೆ ಜಗಜೀವನ್‌ರಾಮ್‌ರವರ ಪ್ರತಿಮೆಯನ್ನೂ ಸಹ ಮಾಡಬೇಕೆಂದು ಅನೇಕ ಸಲ ಅವರ ಜನ್ಮದಿನಾಚರಣೆಯ ಸಂದರ್ಭಗಳಲ್ಲಿ ಮಾತನಾಡಿದ್ದೇವೆ. ಎಲ್ಲಿ ಪ್ರತಿಮೆ ಹಾಕಬೇಕು ಎಂಬ ಬಗ್ಗೆ ಜಿಜ್ಞಾಸೆ ಇತ್ತು, ಕೊನೆಗೆ ವಿಧಾನಸೌಧದ ಮುಂದೆ ಹಾಕಬೇಕೆಂದು ನಿರ್ಧಾರವಾಗಿತ್ತು. ಆ ಪ್ರತಿಮೆಗಳು ಎಲ್ಲಿ ಆಗುತ್ತಿದೆ, ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ವಿವರಣೆ ನೀಡಬೇಕು. ಶ್ರೀ ನಿಜಲಿಂಗಪ್ಪನವರು ರಾಷ್ಟ್ರ ನಾಯಕರು, ಅವರ ಹುಟ್ಟು ಹಬ್ಬವನ್ನು ನಾವು ಸರ್ಕಾರದ ವತಿಯಿಂದ ಆಚರಣೆ ಮಾಡಬೇಕು ಎಂಬುದನ್ನು ನಾವೆಲ್ಲರೂ ನಿರ್ವಿವಾದದಿಂದ ಒಪ್ಪಿಕೊಳ್ಳಬೇಕು. ಇದರ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆ ಮಾಡಬೇಕು. ಆನಂತರ, ಈ ರಾಜ್ಯದ ಪ್ರಥಮ ಮುಖ್ಯ ಮಂತ್ರಿಗಳಾದ ಕ್ಯಾಸಂಬಳ್ಳಿ ಚಂಗಲ್‌ರಾಯರೆಡ್ಡಿಯವರನ್ನು ನಾವೆಲ್ಲರೂ ಮರೆತಿದ್ದೇವೆ. ಅವರು ಈ ರಾಜ್ಯದ ಪ್ರಪ್ರಥಮ ಮುಖ್ಯಮಂತ್ರಿಗಳಾಗಿದ್ದರು. ಅವರ ಮತ್ತು ಕೆ.ಸಿ. ರೆಡ್ಡಿಯವರ ಕಾಲದಲ್ಲಿ ಹೆಚ್.ಎಂ.ಟಿ. ಇನ್ನೂ ಅನೇಕ

ಕಾರ್ಖಾನೆಗಳು ಕರ್ನಾಟಕಕ್ಕೆ ಬಂತು. ಕೆ.ಸಿ. ರೆಡ್ಡಿಯವರೂ ಈ ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾಗಿದ್ದರು. ಆದ್ದರಿಂದ ನಿಜಲಿಂಗಪ್ಪನವರ, ಜಗಜೀವನ್‌ರಾಮ್‌ರವರ ಪ್ರತಿಮೆ ಮಾಡುವ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಚಂಗಲ್ ರಾಯರೆಡ್ಡಿಯವರ ಸ್ಮರಣೆಗಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು. ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ 1998-99ರಲ್ಲಿ ಉಪಚುನಾವಣೆಗಳನ್ನು ನಡೆಸಲು ಹತ್ತು ಲಕ್ಷ ರೂಪಾಯಿಗಳನ್ನು ತಾವು ಕೊಡುತ್ತಿದ್ದೀರಿ. ಇಷ್ಟು ಹಣ ಬೇಕಾಗುತ್ತದೆ, ಕೊಟ್ಟಿರುವುದು ಸಂತೋಷ. ನಗರಸಭೆಗಳ ಮತ್ತು ಪುರಸಭೆಗಳ ಸಂಪನ್ಮೂಲದ ಬಗ್ಗೆ ನಾವು ಅನೇಕ ಸಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಪ್ರತಿ ವರ್ಷ ಆಲ್ಲಿನ ಚುನಾಯಿತ ಅಧ್ಯಕ್ಷರಾಗಿರಬಹುದು, ಉಪಾಧ್ಯಕ್ಷರಾಗಿರಬಹುದು ಬಂದು ನಮಗೆ ಇಷ್ಟು ಹಣವನ್ನು ಕೊಡಿ ಎಂದು ಸರ್ಕಾರದಲ್ಲಿ ಕೇಳುತ್ತಾರೆ. ತಾವು ಭಿಕ್ಷೆಯನ್ನು ಕೊಟ್ಟಂತೆ ಮೂರು ಮೂರು ತಿಂಗಳಿಗೆ ಒಂದಿಷ್ಟು ಹಣವನ್ನು ಕೊಡುತ್ತೀರಿ. ಅನೇಕ ಪುರಸಭೆಗಳಿಗೆ ಮತ್ತು ನಗರ ಸಭೆಗಳಿಗೆ ಪೌರಕೆಯನ್ನು ಕೊಂಡುಕೊಳ್ಳಲು ಹಣವಿಲ್ಲದಿರುವ ಸ್ಥಿತಿ ಇದೆ. ಅನೇಕ ನಗರಸಭೆ ಮತ್ತು ಪುರಸಭೆಗಳಿಗೆ ಪರಕೆಯನ್ನು ಕೊಂಡುಕೊಳ್ಳುವುದಕ್ಕೂ ಹಣ ಇಲ್ಲದೆ ಇರತಕ್ಕಂತಹ ಪರಿಸ್ಥಿತಿ ಇದೆ. ಚುನಾಯಿತ ವ್ಯವಸ್ಥೆ ಇರುವಾಗ ಅದಕ್ಕೆ ಎಷ್ಟು ಹೆಚ್ಚಿನ ಒತ್ತನ್ನು ನಾವು ಕೊಡಬೇಕು, ಹೆಚ್ಚಿನ ಹಣ ಕೊಡಬೇಕು, ಅದನ್ನು ಕೊಡುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಒಂದು ಆಕ್ಟ್ರಾಯ್ ತರುವುದು ಒಳ್ಳೆಯದು. ಯಾರು ಏನಾದರೂ ಹೇಳಲಿ ಯಾರು ಅದಕ್ಕೆ ವಿರೋಧ ಮಾಡಿದರೂ ಚಿಂತೆ ಇಲ್ಲ. ಅವರವರ ಸಂಪನ್ಮೂಲಗಳನ್ನು ಅವರವರು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಆ ದೃಷ್ಟಿಯಿಂದ ಆಕ್ಟ್ರಾಯ್ ತರಬೇಕು. ಯಾರು ವಾಣಿಜ್ಯ ಸಂಸ್ಥೆಗಳು ವಿರೋಧ ಮಾಡಲಿ, ಆಕ್ಟ್ರಾಯ್ ತಂದರೆ ಅವರ ಸಂಪನ್ಮೂಲ ಅಭಿವೃದ್ಧಿ ಮಾಡುವುದಕ್ಕೆ ಅನುಕೂಲ ಇದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕೆಂದು ಕಳಕಳಿ ಮನವಿ ಮಾಡಿ ನಿಮ್ಮ ಪೂರಕ ಅಂದಾಜಿಗೆ ವಿರೋಧ ಇಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಮಾರುತಿರಾವ್ ಇ. ಪವಾರ್ (ನರಸಿಂಹರಾಜ) : 1998-99ನೇ ಸಾಲಿನ ಪೂರಕ ಅಂದಾಜಿನಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ತೋರಿಸಿದ್ದೀರಿ, ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಿಗೆ 70 ಕೋಟಿ ರೂಪಾಯಿ ಎಂದು ತೋರಿಸಿದ್ದೀರಿ, ಅದರಲ್ಲಿ ಮೈಸೂರಿಗೆ ಸೇರಿದ ಕೆಲವು ಬಿಲ್‌ಗಳು ಬಾಕಿ ಇವೆ, ಇದರಲ್ಲಿ ಮೈಸೂರಿನದು ಸೇರಿದೆಯಾ ಇಲ್ಲ, ಏಕೆಂದರೆ ಕೃಷ್ಣಮೂರ್ತಿಯವರಿಗೆ ಒಂದು ವರ್ಷದಿಂದ ಪೇಮೆಂಟ್ ಆಗಲಿಲ್ಲ. ತಾವು ಮಾಡಿರುವುದು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದರಲ್ಲಿ ಮೈಸೂರು ಸೇರಿದೆಯಾ? ಎಂದು ಹೇಳಬೇಕು.

+ ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪೂರಕ ಅಂದಾಜುಗಳ ಬಗ್ಗೆ ಮಾತನಾಡಿ ವಿರೋಧ ಏನೂ ವ್ಯಕ್ತಪಡಿಸಲಿಲ್ಲ. ಆದರೆ ಈ ತರಹ ಅಗತ್ಯ ಇತ್ತೇ. ಅನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ರಾಜ್ಯಾಂಗದ 205ನೇ ವಿಧಿಯಲ್ಲಿ ಸರ್ಕಾರ ಯಾವುದೇ ಸರ್ಕಾರ ಇದು ಎಲ್ಲಾ ಕಾಲದಲ್ಲೂ ಎಲ್ಲಾ ಸರ್ಕಾರಗಳೂ ಮಾಡಿಕೊಂಡು ಬಂದಿತ್ತು. ಸಿದ್ದರಾಮಯ್ಯನವರ ಕಾಲದಲ್ಲಿ ಅಲ್ಲ, ಬಹಳ ಎಫಿಷಿಯೆಂಟ್ ಫೈನಾನ್ಸ್ ಮಿನಿಸ್ಟರ್ ಕೇಂದ್ರದಲ್ಲಿರಬಹುದು, ರಾಜ್ಯದಲ್ಲಿರಬಹುದು ಎಲ್ಲರ ಕಾಲದಲ್ಲಿ ಇದು ನಡೆದುಕೊಂಡು ಬಂದಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಿಮ್ಮ ಅಧಿಕಾರವನ್ನು ನಾವು ಕ್ವೊಶ್ಚನ್ ಮಾಡಲಿಲ್ಲ.

ಶ್ರೀ ಸಿದ್ದರಾಮಯ್ಯ : ಆರ್ಟಿಕಲ್ 205ರಲ್ಲಿ ಏನು ಹೇಳುತ್ತಾರೆಂದರೆ, ``If the amount authorised by any law made in accordance with the provisions of Article 204 to be expanded for a particular service for the current financial year is found to be insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financial statement for that year ....."

ಈ ತರಹ ಇಲ್ಲಿ ಬಂದಿರತಕ್ಕಂಥದ್ದು. ಆದ್ದರಿಂದ ಇದು ನೀವು ಇದನ್ನು ಕಂಡೋನ್ ಮಾಡುತ್ತೀವೆ, ಕಾನೂನಿಗೆ ವಿರುದ್ಧವಾಗಿ ಕಂಡೋನ್ ಮಾಡತಕ್ಕಂತಹ ಅಗತ್ಯವಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ರಾಜ್ಯಾಂಗದ ಚೌಕಟ್ಟಿನಲ್ಲಿ ಪೂರಕ ಅಂದಾಜುಗಳನ್ನು ತಂದಿರತಕ್ಕಂಥದ್ದು ಇಲ್ಲಿ ಒಟ್ಟು 204 ಕೋಟಿ 37 ಲಕ್ಷ ಪೂರಕ ಅಂದಾಜುಗಳನ್ನು ಇದರಲ್ಲಿ 19.82 ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಿಗೆ ಹಣ ಬಂದಿರತಕ್ಕಂಥದ್ದು ಇದನ್ನು ಸಂಬಂಧಪಟ್ಟ ಇಲಾಖೆಗಳಿಗೆ ನಾವು ಹಣ ಬಿಡುಗಡೆ ಮಾಡುತ್ತೀವೆ. ಇದರಿಂದ ನಮಗೆ ಅಡಿಷನಲ್ ರಿಸೋರ್ಸಸ್ ಇದು. ಆ ಕಾರಣದಿಂದ ಸರ್ಕಾರದ ಮೇಲೆ ಭಾರ ಬರತಕ್ಕಂಥದ್ದು, ಅವರು ಕೊಟ್ಟ ಹಣ ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡುತ್ತೀವೆ. ಇದು 19.27 ಲಕ್ಷ, 59.90 ಲಕ್ಷ ರೂಪಾಯಿಗಳು ನಾವು ಬೇರೆ ಬೇರೆ ಇಲಾಖೆಗಳಿಗೆ ಬಡ್ಜೆಟ್ ನಲ್ಲಿ ಹಣ ಕೊಟ್ಟಿದ್ದೇವೆ. ಅದರಲ್ಲಿ ಎಸ್‌ಸಿಪಿಟಿಎಸ್ ಪಿಗೆ ಖರ್ಚು ಮಾಡಬೇಕು. ನಿಮಗೆ ಗೊತ್ತಿರುವ ರೀತಿಯಲ್ಲಿ ಇದನ್ನು ಒಪ್ಪಿಗೆ ಪೂಲ್ ಮಾಡಿ, ಆ ಪೂಲ್ ಮಾಡಿದ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ, ಮನೆ ಕಟ್ಟಿಕೊಳ್ಳುವುದಕ್ಕೆ ಅವರ ಜಮೀನಿಗೆ ನೀರು ಕೊಡುವುದಕ್ಕೆ ಹಣ ನಾವು ಖರ್ಚು ಮಾಡುತ್ತೀವೆ. ಬಡ್ಜೆಟ್ ನಲ್ಲಿ 50 ಕೋಟಿ ರೂಪಾಯಿ ಪೂಲ್ ಮಾಡಿ ಇಟ್ಟಿದ್ದೆವು. ಮೊದಲನೇ ಬಾರಿಗೆ ನಾವು ಯಾವುದೂ ಕೂಡ ಬಡ್ಜೆಟ್ ನಲ್ಲಿ ಏಪ್ರಿಲ್ ಒಂದನೇ ತಾರೀಖಿನಿಂದ ಖರ್ಚು ಮಾಡತಕ್ಕಂತಹ ವ್ಯವಸ್ಥೆ ಮಾಡಿರಲಿಲ್ಲ. ಈ ಸಾರಿ ಮೊದಲನೇ ಬಾರಿಗೆ 1.4.98ರಿಂದಲೇ ಖರ್ಚು ಮಾಡುವುದಕ್ಕೆ ಅವಕಾಶವಾಗಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಅವುಗಳನ್ನು ಮಾಡುವುದಕ್ಕೆ 50 ಕೋಟಿ ರೂಪಾಯಿ ಪೂಲ್ ಮಾಡಿದ್ದೇವೆ. ಮತ್ತೆ 59.90 ಲಕ್ಷ ರೂಪಾಯಿಗಳನ್ನು ಪೂಲ್ ಮಾಡಿದ್ದೇವೆ. ಆದ್ದರಿಂದ ಇದರಲ್ಲಿ ಅಲ್ಲಿ ತೆಗೆದು ಇಲ್ಲಿ ಖರ್ಚು ಮಾಡುವುದಕ್ಕೆ ಬೇರೆ ಕಡೆ ಇಟ್ಟಿರುವುದು ಕ್ಯಾಷ್ ಔಟ್ ಗೋ ಇಲ್ಲ. ಇಷ್ಟು ಹೋಗುತ್ತದೆ. ಉಳಿದದ್ದು 124 ಕೋಟಿ ರೂಪಾಯಿಗಳು 65ಲಕ್ಷ ರೂಪಾಯಿ ಕ್ಯಾಷ್ ಔಟ್ ಇದೆ. ಇದರಲ್ಲಿ ಬಹಳ ಮುಖ್ಯವಾಗಿ 70 ಕೋಟಿ ರೂಪಾಯಿ ನಾವು ಈ ನ್ಯಾಷನಲ್ ಗೇಮ್ಸ ಗೆ ಕೊಡಬೇಕಾಗಿದೆ. ಅದರಲ್ಲಿ ಸುಮಾರು 134 ಕೋಟಿ ರೂಪಾಯಿಗಳು ಖರ್ಚಾಗಿದೆ. ನಾವು ಇಲ್ಲಿಯವರೆಗೆ 85 ಲಕ್ಷ ರೂಪಾಯಿ ಸರ್ಕಾರದಿಂದ ಕೊಟ್ಟಿದ್ದೇವೆ. ಗವರ್ನಮೆಂಟ್ ಆಫ್ ಇಂಡಿಯಾದಿಂದ 9.08 ಲಕ್ಷ ಬಂದಿದೆ. ಸ್ಪಾನ್ಸರ್ ಶಿಪ್ ನಿಂದ

7.21 ಲಕ್ಷ ರೂಪಾಯಿ ಬಂದಿದೆ. ನಾವು ಸ್ವಾನ್ಸರ್ ಶಿಫ್ ನಿಂದ ಹೆಚ್ಚು ಬರುತ್ತದೆ ಎಂದು ಲೆಕ್ಕ ಹಾಕಿದ್ದೆವು. ಇದಕ್ಕೆ ಎಲ್ಲಾ ಕೊಡುತ್ತಾರೆ ಇನ್‌ಕಮ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಡಿಸಿ ಎಂದು ಬಹಳ ಜನ ಹೇಳಿದ್ದರು. ಕೇಂದ್ರ ಸರ್ಕಾರದವರು ಅದನ್ನು ಇನ್‌ಕಮ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಡಲಿಲ್ಲ. ಆ ಕಾರಣದಿಂದ ಸ್ವಾನ್ಸರ್‌ಶಿಪ್ ನಿಂದ ಹಣ ಹೆಚ್ಚಿಗೆ ಬರಲಿಲ್ಲ. ಆ ಕಾರಣದಿಂದ ಸರ್ಕಾರದ ಮೇಲೆ ಹೆಚ್ಚಿಗೆ ಹೊರೆ ಬೀಳಬೇಕಾಯಿತು. 143 ಕೋಟಿ ರೂಪಾಯಿಯಲ್ಲಿ 130 ಕೋಟಿ ರೂಪಾಯಿ ಅಸೆಟ್ ಕ್ರಿಯೇಟ್ ಆಗಿದೆ. ಬೆಂಗಳೂರು ಮೈಸೂರಿನಲ್ಲಿ ಇಂಡೋರ್ ಸ್ಟೇಡಿಯಮ್ ಆಗಿದ್ದರಿಂದ 130 ಕೋಟಿ ರೂಪಾಯಿಯಲ್ಲಿ 13 ಕೋಟಿ ರೂಪಾಯಿ ಮಾತ್ರ ಅದನ್ನು ಆರ್ಗನೈಸ್ ಮಾಡುವುದಕ್ಕೆ ಮತ್ತು ಬಂದಂತಹ ವ್ಯವಸ್ಥೆಯನ್ನು ನೋಡುವುದಕ್ಕೆ ಮಾಡಿದ್ದು. ನಾವು ಆಗ ಏನು ಮಾಡಿದ್ದು, ಬ್ಯಾಂಕುಗಳಿಂದ ಸುಮಾರು 50 ಕೋಟಿ ರೂಪಾಯಿ ಸಾಲ ತೆಗೆದುಕೊಂಡು ಹೋದ ವರ್ಷ 50 ಕೋಟಿ ರೂಪಾಯಿಗಳು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ತೆಗೆದುಕೊಂಡಿದ್ದೆವು. ಅದು ಪೂರ್ಣ ಖರ್ಚು ಮಾಡುವುದಕ್ಕೆ ಆಗಲಿಲ್ಲ. ಬರೀ 50 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದು, ಹಾಗಾಗಿ ಕಳೆದ ವರ್ಷ 1997-98ರಲ್ಲಿ ಕೊಡುವುದಕ್ಕೆ ಆಗಲಿಲ್ಲ. ಈ ವರ್ಷ ಬಡ್ಡಿ ಬೆಳೆಯುತ್ತಿದೆ. ಈ 10 ಕೋಟಿ ರೂಪಾಯಿ ಬ್ಯಾಂಕುಗಳಿಗೆ ಕೊಟ್ಟರೂ ಕೂಡ ಇನ್ನು ಸುಮಾರು 54 ಕೋಟಿ ರೂಪಾಯಿ ಬ್ಯಾಂಕಿನಲ್ಲಿದೆ. ಕೆನರಾ ಬ್ಯಾಂಕ್, ವೈಶ್ಯ ಬ್ಯಾಂಕ್ ಮತ್ತು ಇನ್ನಿತರೆ ಬ್ಯಾಂಕುಗಳಲ್ಲಿ ಇದನ್ನು ನೆಗೋಷಿಯೇಟ್ ಮಾಡಿ ಒಂದೇ ಸಾರಿ ಸೆಟ್ಲ್‌ಮೆಂಟ್ ಮಾಡಬೇಕೆಂದು 71 ಕೋಟಿ ರೂಪಾಯಿಗಳು ನಾವು ಇಟ್ಟುಕೊಂಡಿದ್ದೇವೆ. ಇದರಲ್ಲಿ ಕೆಲವು ಇಲ್ಲ. ಆ ಕಾರಣದಿಂದ ಇದನ್ನು ಸಪ್ಲಿಮೆಂಟರಿ ಎಸ್ಟಿಮೇಟ್ ನಲ್ಲಿ ತರಬೇಕಾಗಿ ಬಂದಿತು. ಭಾರಿ ಬಡ್ಡಿ ಬೀಳುತ್ತಿದೆ. ಅದನ್ನು ತೀರಿಸಬೇಕು. ಕೆಲವು ಪೆಂಡಿಂಗ್ ಬಿಲ್ ಇದೆ. ನೀವು ಅದಕ್ಕೆ ಪೂರ್ಣ ಲೆಕ್ಕ ಕೊಡಬೇಕೆಂದು ಹೇಳಿದರು, ಆಡಿಟ್ ಕೂಡ ಇವತ್ತು ಮುಗಿಯುತ್ತಿದೆ. ಅದು ಆದ ಮೇಲೆ ನಾವು ಇದನ್ನು ಈಗ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ನಾವು ಕಾನೂನು ಚೌಕಟ್ಟಿನ ಹೊರಗಡೆ ಏನೂ ಇಲ್ಲ. ಇದು ಒಂದು. ಮತ್ತೆ ಮನೆಗಳಿಗೆ 28 ಕೋಟಿ ರೂಪಾಯಿಗಳು ಎನ್ ಸಿಡಿಸಿಯವರು ನಮಗೆ ಸ್ಪಿನ್ನಿಂಗ್ ಮಿಲ್‌ಗಳಿಗೆ, ಆಯಿಲ್ ಮಿಲ್‌ಗಳಿಗೆ ಸಾಲ ಕೊಟ್ಟಿದ್ದರು. ಅದನ್ನು ಈ ಅಪೆಕ್ಸ್ ಬ್ಯಾಂಕ್ ಮೂಲಕ ಕೊಟ್ಟಿದ್ದರು. ಸೊಸೈಟಿಗಳು ಕೊಡಲಿಲ್ಲ. ನಾವು ಗವರ್ನಮೆಂಟ್ ಗ್ಯಾರಂಟಿ ಎನ್ ಸಿಡಿಸಿಗೆ ಕೊಡುತ್ತೇವೆ, ಆ ಗ್ಯಾರಂಟಿ ನಾವು ರಿವೋಕ್ ಮಾಡುತ್ತೇವೆ, ನೀವು ಕೊಡದ ಹೋದರೆ ಎಂದು ಎನ್‌ಸಿಡಿಸಿ ಯವರು ಒತ್ತಾಯ ಮಾಡಿದರು, ಅಪೆಕ್ಸ್ ಬ್ಯಾಂಕ್‌ನವರೂ ಕೂಡ ಡಿಫಾಲ್ಟ್ ಆದರು ಕೋ ಆಪರೇಟಿವ್ ಸೊಸೈಟಿಗಳು ಇವೆಲ್ಲಾ ಸತ್ತು ಹೋಗುತ್ತವೆ ಎಂದು ಎಲ್ಲಾ ಕಡೆಯಿಂದ ಒತ್ತಾಯ ಬರುತ್ತಿತ್ತು. ಆ ಕಾರಣದಿಂದ ನಾವು 14 ಕೋಟಿ ರೂಪಾಯಿ ಮಾರ್ಚ್ ಎಂಡ್‌ನಲ್ಲಿ ಕೊಟ್ಟಿದ್ದು ಮತ್ತು ಇನ್ನು 14 ಕೋಟಿ ನಾವು ಕೊಡಬೇಕು. ಒಟ್ಟು 28 ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಒಂದು ಸಾರಿ ಸೆಟ್ಲ್‌ಮೆಂಟ್ ಮಾಡಿ ಅವರ ಪೀನಲ್ ಇಂಟರೆಸ್ಟ್ ಎಲ್ಲಾ ರಿವೋಕ್ ಮಾಡುತ್ತೇವೆ, ಇನ್ನು ಕೆಲವು ರಿಯಾಯಿತಿ ಕೊಡುತ್ತೇವೆಂದು ಹೇಳಿದ ಮೇಲೆ ಮಾತುಕತೆ ಆಗದೆ ನಾವು ಬಡ್ಜೆಟ್ ಮಂಡಿಸಿದ್ದೆವು, ಮಾತುಕತೆ ಆದ ಮೇಲೆ ನಾವು ಒಪ್ಪಿಕೊಂಡ ಮೇಲೆ ನಾವು 20 ಕೋಟಿ ಕೊಡಬೇಕಾಗುತ್ತದೆ. ಇವು ಮೇಜರ್ ಐಟಂ ಇನ್ನು ಉಳಿದವು ಐದು ಲಕ್ಷ, 10 ಲಕ್ಷ ಇದೆ,

ಟೆಕ್ನಿಕಲ್ ಎಜ್ಯುಕೇಷನ್‌ಗೆ ಬಹಳ ಹಿಂದೆ ತೆಗೆದುಕೊಂಡಿರತಕ್ಕಂಥದ್ದು, ವರ್ಲ್ಡ್‌ಬ್ಯಾಂಕ್ ಅಸಿಸ್ಟೆನ್ಸ್ 46 ಕೋಟಿ ಇತ್ತು. ಅದು ಕೇಂದ್ರ ಸರ್ಕಾರ ಅದನ್ನು ಹೆಚ್ಚು ಮಾಡಿತು. ನಾವು ಹೋದ ಸಾರಿ ದುಡ್ಡು ಇಟ್ಟಿದ್ದೆವು. ಆದರೆ ಅವರು ಆರು ಕೋಟಿ ರೂಪಾಯಿಯಷ್ಟು ಖರ್ಚು ಮಾಡದೆ ಮಾರ್ಚ್ ಎಂಡ್‌ನಲ್ಲಿ ಸರೆಂಡರ್ ಮಾಡಿ ಬಿಟ್ಟಿದ್ದಾರೆ. ಮಾರ್ಚ್ ಎಂಡ್‌ನಲ್ಲಿ ಬಡ್ಜೆಟ್ ಮಂಡಿಸಿದ್ದು 18ನೇ ತಾರೀಖು. ಅವರು ಖರ್ಚು ಮಾಡಲಿಲ್ಲ. ವಾಪಸ್ ಕೊಟ್ಟಿದ್ದು ಮಾರ್ಚ್ ಎಂಡ್‌ನಲ್ಲಿ. ನಾವು ಅದು ಹೇಗೆ ನೋಡಿಕೊಳ್ಳುವುದು, ಆದ್ದರಿಂದ 5 ಕೋಟಿ ಚಿಲ್ಲರೆ ನಾವು ಉಳಿಕೆ ಹಣ ಅವರಿಗೆ ಕೊಡಬೇಕು. ಅವರು 30.6.98ರ ಒಳಗೆ ಮುಗಿಸಬೇಕೆಂದು ಇದೆ, ಅದಕ್ಕೋಸ್ಕರ ತಕ್ಷಣ ಹಣ ಕೊಡಬೇಕೆಂದು ಇದನ್ನು ಸಪ್ಲಿಮೆಂಟರಿ ತಂದಿರತಕ್ಕಂಥದ್ದು. ಒಟ್ಟಾರೆ ಬಡ್ಜೆಟ್ ಇರುವುದು 15,500 ಚಿಲ್ಲರೆ ಕೋಟಿ. ಇದರಲ್ಲಿ 224 ಕೋಟಿ ಎಂದರೆ ಎಷ್ಟು ಆಗುತ್ತದೆ, ಒಂದು ಪರ್ಸೆಂಟ್ ಇದನ್ನು ನೀವು ಸರಿಯಾಗಿ ಬಡ್ಜೆಟ್ ಮಂಡಿಸಲಿಲ್ಲ ಎಂದರೆ ಅದು ಸರಿಯಾ ಎಂಬುದನ್ನು ನೀವೇ ಕ್ವೊಶ್ಚನ್ ಮಾಡಬೇಕು. Not even 1%. Out of, 50,000 ಬಡ್ಜೆಟ್ ಇರುವಾಗ ಅದರಲ್ಲಿ 124 ಕೋಟಿ .....

ಶ್ರೀಮತಿ ಪ್ರಮೀಳಾ ನೇಸರ್ಗಿ : ಡಿಪಾರ್ಟ್‌ಮೆಂಟ್ ವೈಸ್ ಮಾಡಿ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಡಿಪಾರ್ಟಮೆಂಟ್ ವೈಸ್ ಮಾಡಿದ್ದೇವೆ. ಎಲ್ಲಾ ಸಣ್ಣ ಪುಟ್ಟವು ಇದ್ದಾವೆ. ಮೀನುಗಾರ ಸೊಸೈಟಿಗೆ ಅವರಿಗೆ ಸಂಬಳ ಕೊಡುವುದಕ್ಕಾಗಿ 10 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಇದು ನಮಗೆ ಗೊತ್ತಿರಲಿಲ್ಲ, ಅವರು ಬಡ್ಜೆಟ್ ಮಂಡನೆ ಮಾಡುವಾಗ ಕೇಳಲಿಲ್ಲ, ಆ ಮೇಲೆ ಕೇಳಿದರು. ಮೈಸೂರು ಮಿನರಲ್ಸ್‌ಗೆ ಏಕೆ ಕೇಳಿ ಕೊಟ್ಟಿರಿ, ಆದ್ದರಿಂದ ಮೈಸೂರು ಮಿನರಲ್ಸ್‌ಗೆ ಒಂದು ಕಾಂಪ್ರಹೆನ್ಸೀವ್ ಪ್ಲಾನ್ ಮಾಡಿದ್ದೇವೆ. ಕಾಂಪ್ರೆಹೆನ್ಸೀವ್ ಪ್ಲಾನ್ ಮಾಡಿದ್ದರಿಂದ ಕೆಲವರು ಕೋರ್ಟಿಗೆ ಹೋಗಿ ಅವರ ಹಣ ನಿಂತುಬಿಟ್ಟಿದೆ. ಸಂಬಳ ಕೊಡುವುದಕ್ಕೆ ಕಷ್ಟದ ಪರಿಸ್ಥಿತಿ ಇದೆ. ಆದರೆ ಎಂಪ್ಲಾಯೀಸ್ ಎಲ್ಲಾ ಬಂದು ಗಲಾಟೆ ಮಾಡುತ್ತಿದ್ದಾರೆ. ಸಂಬಳ ಕೊಡುವುದಕ್ಕೆ ಕಷ್ಟವಾಗಿದೆ, ಆದ್ದರಿಂದ ಎರಡು ಕೋಟಿ ಸಾಫ್ಟ್ ಲೋನ್ ಕೊಡಿ ನಾವು ಅದೆಲ್ಲಾ ಬಂದ ಮೇಲೆ ವಾಪಸ್ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿ ಎರಡು ಕೋಟಿ ಲೋನ್ ಕೊಟ್ಟಿದ್ದೇವೆ. ನೀವು ಹೇಳುವುದು ನಿಜ. ನಾನು ಅದನ್ನೇ ಬಡ್ಜೆಟ್‌ನಲ್ಲೂ ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇದರ ಮೇಲೆ ನಾವು 9,000 ಕೋಟಿ ರೂಪಾಯಿ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಮೇಲೆ ಮಾಡಿದ್ದೇವೆ. ನಾಲ್ಕು ಸಾವಿರ ಕೋಟಿ ನಮ್ಮ ರಾಜ್ಯದ್ದೇ ಇದೆ. ನಾಲ್ಕೈದು ಅಂಡರ್ ಟೇಕಿಂಗ್ ಬಿಟ್ಟರೆ ಕೆಲವೆಲ್ಲಾ ನಷ್ಟದಲ್ಲಿ ನಡೆಯುತ್ತಿವೆ. ಅದಕ್ಕೋಸ್ಕರ ಕೆಲವನ್ನು ಸರಿಪಡಿಸುವುದಕ್ಕೆ ಸಾಧ್ಯವಾದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲವಾದವನ್ನು ಡಿಸ್‌ಪೋಸ್ ಮಾಡುತ್ತೇವೆ. ಅದಕ್ಕೆ ಡಿಸ್ ಇನ್‌ವೆಸ್ಟ್ ಮೆಂಟ್ ಮಾಡಬೇಕು. ಅದಕ್ಕೋಸ್ಕರ ಒಂದು ಕಮಿಟಿ ಮಾಡಿದ್ದೇವೆ. ಸಾಧ್ಯವಾದ ಮಟ್ಟಿಗೆ ಕೆಲವು ಡಿಸ್ ಇನ್‌ವೆಸ್ಟ್‌ಮೆಂಟ್ ಕೂಡ ಮಾಡಬೇಕಾಗುತ್ತದೆ. ಇದರಲ್ಲಿ ಯಾವುದೇ ತತ್ವ ಸಿದ್ಧಾಂತಗಳನ್ನು ಇಟ್ಟುಕೊಂಡು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, as you said, non-plan, non-developmental expenditure is going high. ನಾವು ನಾನ್ ಪ್ಲಾನ್‌ನಲ್ಲಿ ಎಂದೂ ಹೇಳುವುದಕ್ಕಾಗುವುದಿಲ್ಲ. ನಾವು ಪ್ಲಾನ್‌ನಲ್ಲಿ ಕೂಡ ನಾನ್ ಪ್ಲಾನ್ ಅಂದರೆ, ಎಜ್ಯುಕೇಷನ್, ಹೆಲ್ತ್

ಇವೆಲ್ಲಾ ನಾನ್ ಪ್ಲಾನ್‌ನಲ್ಲಿ ಬರುತ್ತವೆ, 90 ಪರ್ಸೆಂಟ್ ಸಂಬಳಕ್ಕೆ ಹೋಗಿ ಬಿಡುತ್ತದೆ. ಔಷಧಿಗಳಿಗೆ, ಟೀಚರ್‌ಗಳ ಸಂಬಳಕ್ಕೆ ಹೋಗಿ ಬಿಡುತ್ತದೆ. ಆರೂವರೆ ಲಕ್ಷ ಜನರಲ್ಲಿ ಮೂರುವರೆ ನಾಲ್ಕು ಲಕ್ಷ ಜನ ಟೀಚರ್ಸ್ ಇದ್ದಾರೆ. ಕಾಲೇಜ್ ಲೆಕ್ಚರರ್ಸ್ ಸಂಬಳ, ಅವರಿಗೆ ಅನುದಾನ ಇದರಲ್ಲೇ ಹೋಗಿ ಬಿಡುತ್ತದೆ. ಹೀಗಾಗಿ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಪ್ಲಾನ್ ನಾನ್‌ಪ್ಲಾನ್ ಡೆವಲಪ್‌ಮೆಂಟಲ್ ನಾನ್‌ಪ್ಲಾನ್, ನಾನ್ ಡೆವಲಪ್‌ಮೆಂಟಲ್ ಎನ್ನತಕ್ಕಂಥದ್ದು ಇದು ಹೆಚ್ಚಾಗತಕ್ಕಂಥದ್ದು ನಿಜ. ಇದಕ್ಕೆ ಕಡಿವಾಣ ಹಾಕಬೇಕು ಎನ್ನುವ ಕಾರಣಕ್ಕೋಸ್ಕರ ಐದು ಪರ್ಸೆಂಟ್ ಸ್ಟಾಫ್ ಅನ್ನು ಕಡಿಮೆ ಮಾಡಬೇಕು, ಈಗ ಖಾಲಿ ಇರತಕ್ಕಂತಹ ಪೋಸ್ಟ್‌ಗಳನ್ನು ಫ್ರೀಜ್ ಮಾಡಬೇಕು. ಎಕ್ಸಫ್ಟ್ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್ ಬಿಟ್ಟು ಬಾಕಿ ಎಲ್ಲಾ ಮಾಡಬೇಕು. ಮತ್ತು ಎಸ್ ಸಿ/ಎಸ್ ಟಿ ಯಾವುದು ಬ್ಯಾಕ್‌ಲಾಗ್ ಇದೆ ಅದಕ್ಕೆ ಅನ್ವಯವಾಗದ ರೀತಿಯಲ್ಲಿ ಮಾಡಬೇಕು. ಡೀಸಲ್, ಪೆಟ್ರೋಲ್ ವೆಹಿಕಲ್ಸ್ ಇದರ ಮೇಲೆ ಯಾರಿಗೆ ಎಷ್ಟು ಬೀಳಬೇಕು, ಆಗಬಾರದು ಎನ್ನತಕ್ಕಂಥದ್ದನ್ನು ಒಂದು ಸಬ್ ಕಮಿಟಿ ದೀರ್ಘವಾಗಿ ಚರ್ಚೆ ಮಾಡುತ್ತಿದೆ. ಯಾರಿಗೆ ಕಾರು ಬೇಕಾಗುತ್ತದೆ, ಯಾರಿಗೆ ವೆಹಿಕಲ್ ಬೇಕಾಗುತ್ತದೆ, ಯಾರಿಗೆ ಟೆಲಿಫೋನ್ ಬೇಕಾಗುತ್ತದೆ, ಯಾರಿಗೆ ಬೇಕಾಗುವುದಿಲ್ಲ, ಯಾರಿಗೆ ಒಟ್ಟಿಗೆ ಓಡಾಡುವುದಕ್ಕೆ ಸಾಧ್ಯವಾಗುತ್ತದೆ, ಇವೆಲ್ಲಾ ವಿಚಾರಗಳನ್ನೂ ಕೂಡ ನಾವು ಗಂಭೀರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಎಲ್ಲಿ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದನ್ನೆಲ್ಲಾ ಮಾಡಬೇಕು ಎನ್ನತಕ್ಕಂಥದ್ದು ಸರ್ಕಾರದ ಉದ್ದೇಶ. ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಯೋಚನೆ ಮಾಡುತ್ತಿದೆ ಎನ್ನತಕ್ಕಂತಹ ಮಾತನ್ನೂ ಕೂಡ ನಾನು ಹೇಳುತ್ತೇನೆ. ಆದ್ದರಿಂದ ವೆಸ್ಟ್‌ಫುಲ್ ಎಕ್ಸ್‌ಪೆಂಡಿಚರ್ ಅದು ಯಾವುದೇ ಭಾಗದಲ್ಲಿದ್ದರೂ ಕೂಡ ಅದನ್ನು ತಡೆಗಟ್ಟಬೇಕು ಎನ್ನತಕ್ಕಂಥದ್ದು, ಮತ್ತು ಮನೆಗಳದ್ದು ಹೌಸಿಂಗ್ ಬೋರ್ಡ್ ನವರು ಮಾಡಿದ್ದು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಜ್ಯುಡಿಷಿಯಲ್ ಆಫೀಸರ್ಸ್‌ಗೆ ನಾವು ಮನೆಗಳನ್ನು ಕೊಡಬೇಕು ಇದು ನಿಮಗೆ ಗೊತ್ತಿದೆ. 100 ಮನೆ ನಾವು ಅವರಿಗೆ ಕೊಡಬೇಕಾಗುತ್ತದೆ, ಮತ್ತೆ ಬೇರೆ ಬೇರೆ ಆಫೀಸರ್ಸ್ ಗಳಿಗೆ ನಾವು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಉಳಿದ ಆರು ನೂರು ಮನೆಗಳಿಗೆ ನಾವು ಅವರಿಗೆ 63 ಎಕರೆ 46 ಎಕರೆ ಜಾಗ ಕೊಟ್ಟಿದ್ದೇವೆ. ಅದಕ್ಕೆ ಬದಲಾಗಿ ಅವರು ಮನೆಗಳನ್ನು ಕಟ್ಟಿ ಕೊಟ್ಟಿದ್ದಾರೆ. ಇನು ಉಳಿದುದ್ದನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನು ಕೆಲವು ಮನೆಗಳು ಮಾರಾಟ ಆಗ ಬೇಕಾಗಿದೆ. ಕೆಲವು ಅಧಿಕಾರಗಳಿಗೆ ನಾವು ಕ್ವಾರ್ಟ್ರ್ಸ್ ಕೊಡಬೇಕಾಗುತ್ತದೆ, ಅವರಿಂದ ನಾವು ಬಾಡಿಗೆ ತೆಗೆದುಕೊಳ್ಳುವದು ಅದೆಲ್ಲಾ ಇದೆ, ಅವರೆಲ್ಲಾ ಕ್ರಯಕ್ಕೆ ಕೊಡುವುದಕ್ಕಾಗುವುದಿಲ್ಲ, ಅವರು ಕ್ರಯಕ್ಕೆ ತೆಗೆದುಕೊಳ್ಳುವುದೂ ಇಲ್ಲ. ಕೆಲವು ಕಡೆ ಯಾವ್ಯಾವುವು ಕ್ರಯಕ್ಕೆ ಕೊಡಬೇಕು ಅದನ್ನೆಲ್ಲಾ ನಾವು ಪ್ರಯತ್ನ ಮಾಡುತ್ತಿದ್ದೇವೆ. ಹಾಗಾಗಿ ಎಲ್ಲೂ ಕೂಡ ನಾವು ಕಾನೂನು ಬಿಟ್ಟು ಏನೇನೋ ಮಾಡಿ ತಂದಿರತಕ್ಕಂಥದ್ದು ಅಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂಥದ್ದು ಸುಭಾಷ್ ಚಂದ್ರಬೋಸ್ ಪ್ರತಿಮೆ ಮಾಡಬೇಕು, ಅದಕ್ಕೆಲ್ಲಾ ಸ್ವಲ್ಪ ಹಣ ಬೇಕಾಗಿತ್ತು ಅದಕ್ಕೋಸ್ಕರ ಅದನ್ನು ನಾವು ಇಲ್ಲಿ ಅಳವಡಿಸಿದ್ದೇವೆ. ಮಾನ್ಯ ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯನವರು, ಜಗಜೀವನ್ ರಾಮ್‌ರವರು, ಕೆ.ಸಿ. ರೆಡ್ಡಿಯವರು, ಇದು ಒಪ್ಪಿಕೊಂಡಿದ್ದೇವೆ. ಜಗಜ್ಜೀವನ್ ರಾಮ್‌ರವರ ಪ್ರತಿಮೆ ಎಲ್ಲಿ ಮಾಡಬೇಕೆಂದು ಇದೆ, ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಏಕೆಂದರೆ ಅವರು ಅವರ ಕಾಲದಲ್ಲಿ

ವ್ಯವಸಾಯಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿತು ಹಸಿರು ಕ್ರಾಂತಿ ಆಯಿತು, ಅನ್ನುವ ಕಾರಣದಿಂದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾಡಬೇಕೆಂದು ಅಭಿಪ್ರಾಯ ಇದೆ. ನಿಜಲಿಂಗಪ್ಪನವರ ಪ್ರತಿಮೆ ಮಾಡಬೇಕೆಂದು ಇದೆ, ಅದನ್ನು ಈಗಾಗಲೇ ನಾವು ಪ್ರಕಟ ಮಾಡಿದ್ದರಿಂದ ಸಂಬಂಧಪಟ್ಟ ಇಲಾಖೆಯವರು ಅದಕ್ಕೆ ಹಣ ಇಟ್ಟು ಕೊಂಡಿದ್ದಾರೆ ಅನ್ನತಕ್ಕಂಥದ್ದು ನನ್ನ ಭಾವನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಪ್ರತಿಮೆಗಳ ಬಗ್ಗೆ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು, ತಾವು ಹೇಳಿದ್ದೀರಿ, ನಿಜವಾಗಿಯೂ ಪ್ರತಿಮೆಗಳ ಅಗತ್ಯ ಇದೆಯಾ? ಪ್ರತಿಮೆಗಳ ಪರಿಸ್ಥಿತಿ ನಾವು ನೋಡಿದ್ದೇವೆ. ಆ ಪ್ರತಿಮೆಗಳ ಕೆಳಗಡೆ ಮಹನೀಯರ ಬಗ್ಗೆ ಕೂಡ ನಾವು ಏನೂ ವಿಚಾರ ಹಾಕಿಲ್ಲ. ನಮ್ಮ ರಾಜ್ಯಕ್ಕೆ ಯಾವ ರೀತಿಯಾಗಿ ಕಾಣಿಕೆ ನೀಡಿದ್ದಾರೆ, ಯಾವ ರೀತಿಯಾಗಿ ಪ್ರಸಿದ್ಧರು, ಅದರಿಂದ ನಾವು ಏನು ಪ್ರೇರಣೆ ತೆಗೆದುಕೊಳ್ಳಬಹುದು, ಎಂದು ನಾವು ಕಾಣುವುದಿಲ್ಲ. ಹಿಂದೆ ಒಂದು ಸಾರಿ ನಾನು ಹೇಳಿದ್ದೆ, ಲಂಡನ್‌ನಲ್ಲಿ ಹಾಲ್ ಆಫ್ ಹೀರೋಸ್ ಎಂದು ಮಾಡಿದ್ದಾರೆ ಹಾಗೆ ನಾವು ಬೆಂಗಳೂರಿನಲ್ಲಿ ಒಂದು ಹಾಲ್ ಮಾಡಿ ಈ ಮಹನೀಯರ ಪ್ರತಿಮೆಗಳನ್ನು ಇಟ್ಟು ಅವರ ಚರಿತ್ರೆ ಹಾಕಿದರೆ ನಮ್ಮ ವಿದ್ಯಾರ್ಥಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ, ಆ ವಿದ್ಯಾರ್ಥಿಗಳು ಆ ಮಹನೀಯರಿಂದ ಪ್ರೇರಣೆ ತೆಗೆದುಕೊಳ್ಳುವ ವ್ಯವಸ್ಥೆಯಾಗಬೇಕು. ಅದು ಬಿಟ್ಟು ಇದೂ ಕೂಡ ಒಂದು ರಾಜಕೀಯವಾಗಿ ಪ್ರತಿಮೆಗಳನ್ನು ಹಾಕುವುದಕ್ಕಿಂತ ಯಾವುದೋ ಕಾಗೆ ಗುಬ್ಬಚ್ಚಿ ಕೂತುಕೊಳ್ಳುವ ಪರಿಸ್ಥಿತಿ, ಅವರ ಜನ್ಮದಿನ ಹಾಗೂ ಅವರ ಮರಣದ ದಿನ ಹೋಗಿ ಮರ್ಯಾದೆ ತೋರಿಸುವುದು ಆಗುತ್ತದೆ. ಅದಕ್ಕೋಸ್ಕರ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ಆ ಮಹನೀಯರಿಂದ ನಮಗೆ ನಿಜವಾಗಿ ಪ್ರೇರಣೆ ಇನ್‌ಸ್ಪಿರೇಷನ್ ಸಿಗಬೇಕು, ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯಬೇಕೆಂದರೆ, ಈ ರೀತಿ ಪ್ರತಿಮೆಗಳನ್ನು ಹಾಕುವುದಕ್ಕಿಂತ ಒಂದು ಹಾಲ್ ಮಾಡಿ, let it become a centre for inspiration. ಇದು ನನ್ನ ಪ್ರಾಮಾಣಿಕವಾದ ಅನಿಸಿಕೆ.

ಶ್ರೀ ಸಿದ್ದರಾಮಯ್ಯ : ಪ್ರತಿಮೆಗಳನ್ನು ಹಾಕತಕ್ಕಂಥದ್ದು ಕರ್ನಾಟಕ ರಾಜ್ಯದಲ್ಲಿ ಒಂದೇ ಅಲ್ಲ ಬೇರೆ ಬೇರೆ ರಾಜ್ಯಗಳಲ್ಲೂ ಹಾಕಿದ್ದಾರೆ. ತಮಿಳುನಾಡಿಗೆ ಹೋದರೆ ಮೆರಿನಾ ಬೀಚ್ .....

ಶ್ರೀ ವಾಟಾಳ್ ನಾಗರಾಜ್ : ಕೇಂದ್ರ ರಾಜಧಾನಿ ದೆಹಲಿಯಲ್ಲಿ ಕೂಡ ರಾಷ್ಟ್ರ ನಾಯಕರ ಪ್ರತಿಮೆಗಳನ್ನು ಹಾಕಿದ್ದಾರೆ. ಲೋಕಸಭೆಯ ಎದುರಿಗೆ ಮಹಾತ್ಮ ಗಾಂಧೀಯವರ ಪ್ರತಿಮೆ ಹಾಕಿದ್ದಾರೆ. ಇದು ಒಂದು ವೇದಾಂತ. ಇದರ ಬಗ್ಗೆ ಚರ್ಚೆ ನಡೆಯಬೇಕು ಬಿಡಬೇಕು ಎಂದು ಆ ಮೇಲೆ ಹೇಳುತ್ತೇನೆ. ಈಗ ನಾನು ತಮ್ಮಲ್ಲಿ ಏನು ಕೇಳುತ್ತೇನೆಂದರೆ, ನಿಜಲಿಂಗಪ್ಪನವರ ಪ್ರತಿಮೆ, ಜಗಜ್ಜೀವನ್ ರಾಮ್ ಪ್ರತಿಮೆ ಮತ್ತು ಕ್ಯಾಸಂಬಳ್ಳಿ ಚಂಗಲ್ ರಾಯರ ಪ್ರತಿಮೆ ಹಾಕುವುದರ ಬಗ್ಗೆ ಸರ್ಕಾರದ ನಿರ್ಧಾರ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಸಿದ್ದರಾಮಯ್ಯ : ಇದರ ಹಿಂದೆ ಇರುವಂತಹ ಸಿದ್ಧಾಂತ ಪ್ರತಿಯೊಂದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದು ಇಲ್ಲಿ ನಡೆದುಕೊಂಡು ಬಂದಿರುವಂತಹ ಪದ್ಧತಿ. ಸಮಾಜದಲ್ಲಿ ಯಾರು ಸಮಾಜಕ್ಕೋಸ್ಕರ ತಮ್ಮನ್ನು ಅರ್ಪಣೆ ಮಾಡಿಕೊಂಡು ಕೆಲಸ ಮಾಡಿದ್ದಾರೆ ಮತ್ತು ಆದರ್ಶಪ್ರಾಯರಾಗಿ ಕೆಲಸ ಮಾಡಿದ್ದಾರೆ, ಆ ವ್ಯಕ್ತಿಗಳು ನಮ್ಮ ಯುವ ಪೀಳಿಗೆಗೆ ಸ್ಫೂರ್ತಿಯಾಗಲಿ,

ಅವರ ವಿಚಾರಗಳು ಅವರಿಗೆ ವೈಚಾರಿಕವಾದ ಜ್ಞಾನವನ್ನು ಕೊಡಲಿ, ಅವರಿಗೆ ಮಾರ್ಗದರ್ಶನವಾಗಲಿ, ಅವರ ನೆನಪು ಇರಲಿ ಎನ್ನುವ ಕಾರಣಕ್ಕೋಸ್ಕರ ನಾವು ಇದನ್ನೆಲ್ಲಾ ಮಾಡುತ್ತಿದ್ದೇವೆ. ನೀವು ಹೇಳಿದ ರೀತಿಯಲ್ಲೂ ಮಾಡಬಹುದು. ಆದರೆ ಇದು ಇಲ್ಲಿ ನಡೆದುಕೊಂಡು ಬಂದಿರುವ ಪದ್ಧತಿ, we cannot go back. ಬೇರೆಯವರದ್ದು ಮಾಡಿದಿರಿ, ಇವರದ್ದು ಏಕೆ ಮಾಡಲಿಲ್ಲ ಎಂದರೆ ಏನು ಹೇಳುತ್ತೀರಿ, ನೆಹರೂ ಅವರದ್ದು ಮಾಡಿದ್ದೀರಿ.....

ಶ್ರೀ ಎಸ್. ಸುರೇಶ್ ಕುಮಾರ್ : ನೀವು ಮಾಡಿ, ಒಂದು ನಾವು ಅರ್ಥ ಮಾಡಿಕೊಳ್ಳಬೇಕು. We are opening flood gates. There is no end.

ಶ್ರೀ ಸಿದ್ದರಾಮಯ್ಯ : ಮಾಡಬೇಕಾಗುತ್ತದೆ. ಇದರಲ್ಲಿ ಏನು ಫ್ಲಡ್ ಗೇಟ್ ಇಲ್ಲ, ಎಂಥದ್ದೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾಳೆ ದೇವರ ಪ್ರತಿಮೆ ತೆಗೆಯಿರಿ ಎಂದು ಹೇಳುತ್ತಾರೆ. ಆದಾದ ಮೇಲೆ ಇದೆಲ್ಲಾ ಒಂದರ ಹಿಂದೆ ಒಂದು ನಡೆಯುತ್ತವೆ. ಪ್ರತಿಮೆಗಳನ್ನು ತೆಗೆದು ಎಲ್ಲಾದರೂ ಮೂಲೆಯಲ್ಲಿಡಿ.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ಜಿಜ್ಞಾಸೆ ಬೇಡ. ಚರ್ಚೆ ಬೇಡ, ಇದರ ಬಗ್ಗೆ ದೊಡ್ಡ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ವಾದ ವಿವಾದ ಮಾಡುವ ಅಗತ್ಯವಿಲ್ಲ.

ಅಧ್ಯಕ್ಷರು : ಅವರ ಅಭಿಪ್ರಾಯಕ್ಕೆ ಅವರು ಬದ್ಧರಾಗಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಾವು ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ತಾವಾಗಿ ಪ್ರಸ್ತಾಪ ಮಾಡಿದ್ದಕ್ಕೆ ಹೇಳುತ್ತಿದ್ದೇನೆ, ದೇವರಾಜ ಅರಸ್ ರವರ ಪ್ರತಿಮೆಯನ್ನು ಬದಲು ಮಾಡಿ ಬೇರೆ ಪ್ರತಿಮೆ ಹಾಕತಕ್ಕಂಥದ್ದು. ನಾವು ಯಾವಾಗಲೂ ಅಲ್ಲಿಂದ ಬರುವಾಗ ಸಾಯಂಕಾಲ ಸಾಕಷ್ಟು ಜನ ದೇವರಾಜ ಅರಸ್‌ರವರ ಪ್ರತಿಮೆಯನ್ನು ನಿಂತು ನೋಡತಕ್ಕಂಥದ್ದು ನೋಡುತ್ತೇವೆ. ಅನೇಕ ಪ್ರತಿಮೆಗಳನ್ನು ಇಲ್ಲಿ ಹಾಕಿದ್ದೀರಿ. ಆದರೆ ಆ ದೇವರಾಜ ಅರಸ್‌ರವರ ಪ್ರತಿಮೆಗೆ ಜನರು ಕೊಡತಕ್ಕಂತಹ ಮಾನ್ಯತೆ, ಅವರು ತೋರಿಸತಕ್ಕಂತಹ ವಿಶೇಷವಾದ ಪ್ರೀತಿ ಏನಿದೆ ಅದು ಯಾರ ವಿಗ್ರಹಗಳಿಗೂ ತೋರಿಸುತ್ತಿಲ್ಲ. ಅದಕ್ಕೋಸ್ಕರ ಅದನ್ನಾದರೂ ಬೇಗ ಬದಲಾವಣೆ ಮಾಡತಕ್ಕಂತಹ ಪ್ರಯತ್ನ ಮಾಡಿ. ಅದು ದೇವರಾಜ್ ಅರಸ್‌ರವರ ರೀತಿಯಲ್ಲಿ ಕಾಣುತ್ತಿಲ್ಲ. ಅಧ್ಯಕ್ಷರು ಹೇಳಿದ ಹಾಗೆ ಅದು ಕೆಂಚೇಗೌಡರ ವಿಗ್ರಹನೇ ಆಗಿದೆ.

ಶ್ರೀ ಸಿದ್ದರಾಮಯ್ಯ : ಕಾಂಗ್ರೆಸ್ ಗವರ್ನಮೆಂಟ್‌ನಲ್ಲೇ ಅದು ಮಾಡಿದ್ದು ಅಲ್ಲವಾ?

ಶ್ರೀ ಟಿ.ಬಿ. ಜಯಚಂದ್ರ : ಆಗಿದೆ, ತಪ್ಪಾಗಿದೆ.

ಶ್ರೀ ಸಿದ್ದರಾಮಯ್ಯ : ಎಲ್ಲರೂ ಕೂಡ ಅದು ಸರಿ ಇಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ನಾವೂ ಕೂಡ ಅದನ್ನು ಬದಲಾಯಿಸಿ ದೇವರಾಜ ಅರಸ್‌ರವರಿಗೆ ಹೋಲಿಕೆ ಬರುವ ಪ್ರತಿಮೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ.

11.20 ಎ.ಎಂ

ಅಧ್ಯಕ್ಷರು : ಮಾನ್ಯ ಕೆಂಚೇಗೌಡರು ಕೆ.ಆರ್. ನಗರದ ಮಾಜಿ ಎಂ.ಎಲ್.ಎಗಳಾಗಿದ್ದಾರೆ. ಅವರು ಮಾನ್ಯ ದೇವರಾಜ್ ಅರಸ್ ರವರ ಜೊತೆಯಲ್ಲಿ ಮೂರನೇ ತರಗತಿಯಲ್ಲಿ ಜೊತೆಯಾಗಿ ಓದಿದವರಾಗಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ದೇವರಾಜ ಅರಸ್‌ರವರ ಪ್ರತಿಮೆಯನ್ನು ಮಾಡುವಾಗಲೇ ಯೋಚನೆ ಮಾಡಿ ಮಾಡಿಸಬೇಕಾಗಿತ್ತು. ಅದನ್ನು ಆತುರಾತುರವಾಗಿ ಮಾಡಿಬಿಟ್ಟಿದ್ದಾರೆಂದು ಕಾಣುತ್ತದೆ. ಆಗ ಮಾನ್ಯ ವೀರಪ್ಪ ಮೊಯಿಲಿಯವರೇ ಅಧಿಕಾರದಲ್ಲಿದ್ದರು. ಅವರು ಮಾನ್ಯ ದೇವರಾಜ ಅರಸ್ ರವರ ಗರಡಿಯಲ್ಲಿ ಪಳಗಿದವರಾಗಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಆಯಿತು, ನಿಮ್ಮ ಕಾಲದಲ್ಲಿ ಆಗಿತ್ತೆಂದು ಹೇಳುತ್ತಾ ಇಲ್ಲ. ಅದನ್ನು ರೆಕ್ಟಿಫೈ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾನು ಅದನ್ನೇ ಹೇಳುತ್ತಿದ್ದೇನೆ.

ಅಧ್ಯಕ್ಷರು : ನಾನು ತಮಗೆ ಹೇಳುವ ಎರಡು ವಿಚಾರಗಳೇನೆಂದರೆ 1993-94ರಲ್ಲಿ ಬೆನಿಫಿಶಿಯರ್ಸ್‌ಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ವರ್ಷದ ಕೊನೆಯಲ್ಲಿ ಮಂಜೂರು ಮಾಡಿದರು. 1994ರಲ್ಲಿ ಚುನಾವಣೆಯಾಗಿ ತಾವು ಅಧಿಕಾರಕ್ಕೆ ಬಂದಿರಿ, ಆಗ 1994-95ರಲ್ಲಿ ತಾವು ಇಂದಿರಾ ಆವಾಸ್ ಯೋಜನೆಯಲ್ಲಿ ಮನೆಗಳಿಗೆ 20 ಸಾವಿರ ರೂಪಾಯಿಗಳನ್ನು ಮಾಡಿದ್ದೀರಿ. ಕೆಲವರು 1993-94ರ ಬೆನಿಫಿಶಿಯರ್ಸ್‌ಗೆ ಮನೆಗಳನ್ನು ಕಟ್ಟಲಿಲ್ಲ. ಹಾಗಾಗಿ ಇವರಿಗೆ 14,500 ರೂಪಾಯಿಗಳನ್ನು ಕೊಡಲಾಗಿದೆ. ಈಗ ಈ ಎರಡು ವರ್ಷದ ಬೆನಿಫಿಶಿಯರ್ಸ್ ಒಂದೇ ಸಲ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾನು ಈ ವಿಚಾರವನ್ನು ಎರಡು ಮೂರು ಸಲ ಸದನದ ಗಮನಕ್ಕೆ ತಂದಿದ್ದೇನೆ. ಇದರಿಂದ ಬಡವರಿಗೆ ತುಂಬಾ ತೊಂದರೆಯಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಕೆಲವರಿಗೆ 14,500 ರೂಪಾಯಿಗಳಲ್ಲಿ ಮನೆಯನ್ನು ಕಟ್ಟುವುದಕ್ಕಾಗುತ್ತಿಲ್ಲ. ಇಂಥವರು ಹೆಚ್ಚು ಜನರೇನೂ ಇಲ್ಲ. ಇಡೀ ರಾಜ್ಯದಲ್ಲಿ ಲೆಕ್ಕಕ್ಕೆ ತೆಗೆದುಕೊಂಡರೆ 1,000 ಅಥವಾ 1,500 ಜನರು ಸಿಗಬಹುದು. ಈಗ ಅವರಿಗೆ ಇನ್ನು ಐದೂವರೆ ಸಾವಿರ ಆರು ಸಾವಿರ ರೂಪಾಯಿಗಳನ್ನು ಜಾಸ್ತಿ ಕೊಡಬೇಕಾಗುವುದು. ಮತ್ತೆ ಅಂಥ ಮಕ್ಕಳಿಗಾಗಿ ಅಂಧರ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಗ್ರಾಂಟ್ ಇನ್ ಏಡ್ ಕೊಡುವಂಥಾದಕ್ಕೆ ನಾನು ಪತ್ರವನ್ನು ಬರೆದಿದ್ದೇನೆ. ಇದರ ಬಗ್ಗೆಯೂ ಕ್ರಮ ತೆಗೆದುಕೊಂಡಿಲ್ಲ. ಈ ಶಾಲೆಗಳು ಕೂಡ ಹೆಚ್ಚು ಇಲ್ಲ. ರಾಜ್ಯದಲ್ಲೆಲ್ಲಾ ಸೇರಿಸಿದರೆ ಇಂತಹ ಶಾಲೆಗಳು 6-7 ಇರಬಹುದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅದು 1990ರಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಇಂದಿರಾ ಆವಾಜ್ ಮತ್ತು ಆಶ್ರಯ ಯೋಜನೆಗಳಿಗೆ 15,000 ರೂಪಾಯಿಗಳು ಇತ್ತು. ಅದಕ್ಕೆ ನಾವು 5,000 ರೂಪಾಯಿಗಳನ್ನು ಸೇರಿಸಿ 20,000 ರೂಪಾಯಿಗಳನ್ನು ಮಾಡಿದ್ದೇವೆ. ತಾವು ಆ ರೀತಿಯಲ್ಲಿ ಕೆಲವು ಮನೆಗಳು ಉಳಿದುಕೊಂಡಿದೆ, ಎಂದು ಹೇಳಿದ್ದೀರಿ. ಅದೆಲ್ಲಾ ವಿವರಗಳನ್ನು ತರಿಸಿ ಎಷ್ಟು ಮನೆಗಳು ಉಳಿದುಕೊಂಡಿದೆ, ಅದಕ್ಕೆ ಎಷ್ಟು ಹಣ

ಬೇಕಾಗುತ್ತದೆನ್ನುವುದನ್ನು ನೋಡಿ ಅದನ್ನು ಕೊಡಿಸುವಂಥಾದ್ದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಅಂಧರ ಶಾಲೆಗಳ ಬಗ್ಗೆ ತಾವು ಏನು ಹೇಳಿದ್ದೀರಿ, ಅದರ ಮಾಹಿತಿಯನ್ನು ತರಿಸುತ್ತೇನೆ.

ಅಧ್ಯಕ್ಷರು : ತಮಗೆ ಧನ್ಯವಾದಗಳು, ಇಂತಹ ಶಾಲೆಯನ್ನು ಬೆಂಗಳೂರು ಮೈಸೂರು ಮೆಯಿನ್ ರೋಡ್‌ನಲ್ಲಿ ರಾಮನಗರದ ಸಮೀಪ ಆದಿಚುಂಚನಗಿರಿ ಸ್ವಾಮೀಜಿಯವರು ನಡೆಸುತ್ತಿದ್ದಾರೆ. ನಾನು ಕೂಡ ಅಲ್ಲಿಗೆ ಹೋಗಿ ಬಂದಿದ್ದೇನೆ.

ಶ್ರೀ ಸಿದ್ದರಾಮಯ್ಯ : ಇದು ಒಂದು ಇದೆ, ಮತ್ತೆ ಜಾನಪದ ಲೋಕದ್ದು ಒಂದು ಇದೆ, ಇದು ಸರ್ಕಾರದ ಪರಿಶೀಲನೆಯಲ್ಲಿದೆ. ನಮ್ಮ ಸರ್ಕಾರ ಇಂತಹ ಆಸಕ್ತ ಜನರಿಗೆ ಸಹಾಯ ಮಾಡುವಂಥಾದ್ದು ಆಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದಕ್ಕೆ ಎಷ್ಟು ಬೇಕೋ ಅಷ್ಟಕ್ಕೆ ಸೆಪ್ಲಿಮೆಂಟರಿ ಎಸ್ಟಿಮೇಟ್ ತೆಗೆದುಕೊಂಡು ಬನ್ನಿ, ನಾವು ಅದಕ್ಕೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಆಗ ಏನು ಕಾನೂನು ಬೇಡ ಅಲ್ಲವೇ?

ಅಧ್ಯಕ್ಷರು : ಅವರು ಮಾನವೀಯ ದೃಷ್ಟಿಯಿಂದ ಹೇಳುವಂಥಾದ್ದು, ನೀವು ಬೇಕಾದರೆ ಎರಡನೆಯ ಬಾರಿ ತನ್ನಿ ನಾವು ಅದನ್ನು ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಎರಡನೆಯ ಸಾರಿ ತೆಗೆದುಕೊಂಡು ಬನ್ನಿ, ನಾವು ಮಾನವೀಯ ದೃಷ್ಟಿಯಿಂದ ಒಪ್ಪುತ್ತೇವೆಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾವು ಅದನ್ನು ಮಾನವೀಯ ದೃಷ್ಟಿಯಿಂದ ಮಾಡಬೇಕಾಗುತ್ತದೆ, ಅದನ್ನು ಮಾಡೋಣ. ಇನ್ನು ಪ್ರತಿಮೆಗಳ ವಿಚಾರವಾಗಿ ಮಾನ್ಯ ನಿಜಲಿಂಗಪ್ಪನವರ ಮತ್ತು ಮಾನ್ಯ ಜಗಜ್ಜೀವನರಾಂರವರ ಪ್ರತಿಮೆಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಮಾಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಪ್ರತಿಮೆಗಳನ್ನು ಮಾಡಿ, ಅದಕ್ಕೆ ವ್ಯಾಕ್ಸ್ ಮೂಸಿಯಂ ಮಾಡಿ ಯಾವ್ಯಾವ ಪ್ರತಿಮೆಗಳು ಹೇಳುತ್ತಾರೋ ಅವೆಲ್ಲವನ್ನೂ ಮಾಡಿ ಅದನ್ನು ನೋಡಲು ಚೆನ್ನಾಗಿರುತ್ತದೆ.

ಶ್ರೀ ಸಿದ್ದರಾಮಯ್ಯ : ತಮ್ಮ ಸಲಹೆಯನ್ನು ಪರಿಶೀಲಸಲಾಗುವುದು. ಈಗ ಪೂರಕ ಅಂದಾಜಿಗೆ ಒಪ್ಪಿಗೆ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಈಗ 1998-99ನೇ ಸಾಲಿನ ಪೂರಕ ಅಂದಾಜಿನ ಮೊದಲನೆ ಕಂತಿನ ಬೇಡಿಕೆಗಳ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ,

"31.3.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 4, 5, 6, 11, 12, 13, 18, 21, 31, 44, 52, 54ಹಾಗೂ 57ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಿಲ್ಲ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗೆ ಮೀರದ ಮೊಬಲಗನ್ನು ಮಂಜೂರು ಮಾಡುವುದು".

ಪ್ರಸ್ತಾವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಪೂರಕ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

1. 1999ರ ಮಾರ್ಚ್ ಅಂತ್ಯದೊಳಗಾಗಿ 'ಮೀನುಗಾರಿಕೆ' ಇದಕ್ಕೆ ಸಂಬಂಧಿಸಿತ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10,00,000ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

2. 1999ರ ಮಾರ್ಚ್ ಅಂತ್ಯದೊಳಗಾಗಿ 'ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು' (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು) ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 10,50,00,000ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

3. 1999ರ ಮಾರ್ಚ್ ಅಂತ್ಯದೊಳಗಾಗಿ 'ಗಣಿ ಮತ್ತು ಭೂವಿಜ್ಞಾನ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,00,00,000 ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 2,00,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

4. 1999ರ ಮಾರ್ಚ್ ಅಂತ್ಯದೊಳಗಾಗಿ 'ಉನ್ನತ ಶಿಕ್ಷಣ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4,77,17,000ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 1,20,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

5. 199ರ ಮಾರ್ಚ್ ಅಂತ್ಯದೊಳಗಾಗಿ 'ಯುವಜನ ಸೇವೆಗಳು' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 70,00,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

6. 1999ರ ಮಾರ್ಚ ಅಂತ್ಯದೊಳಗಾಗಿ 'ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 53,55,000ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

7. 1999ರ ಮಾರ್ಚ್ ಅಂತ್ಯದೊಳಗಾಗಿ 'ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ, ಖಜಾನೆ ಮತ್ತು ಲೆಕ್ಕಾಡಳಿತ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

8. 1999ರ ಮಾರ್ಚ್ ಅಂತ್ಯದೊಳಗಾಗಿ 'ಅರಣ್ಯ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 63,56,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

9. 1999ರ ಮಾರ್ಚ್ ಅಂತ್ಯದೊಳಗಾಗಿ 'ನಗರಾಭಿವೃದ್ಧಿ' (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹೊರತು ಪಡಿಸಿ) ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10,00,000ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

10. 1999ರ ಮಾರ್ಚ್ ಅಂತ್ಯದೊಳಗಾಗಿ 'ಕಟ್ಟಡಗಳು' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 13,24,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

11. 1999ರ ಮಾರ್ಚ್ ಅಂತ್ಯದೊಳಗಾಗಿ 'ಸಹಕಾರ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 28,69,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

12. 1999ರ ಮಾರ್ಚ್ ಅಂತ್ಯದೊಳಗಾಗಿ 'ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,79,96,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

13. 1999ರ ಮಾರ್ಚ ಅಂತ್ಯದೊಳಗಾಗಿ 'ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕಲ್ಯಾಣ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 58,77,68,000 ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 10,00,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕ ಮಂಡನೆ

ಕರ್ನಾಟಕ ಧನವಿನಿಯೋಗ (ನಂ.2) ವಿಧೇಯಕ, 1998

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನವಿನಿಯೋಗ (ನಂ.2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.